

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

Volume : 07 Issue : 131 Sunday 26-01-2025 E-mail : maruti.b.hosamani76@gmail.com Page: 4 Price : Rs. 1/-


## ಉಟಕನೂರು ಗ್ರಾಮ ಪಂಚಾಯತಿ ಸದಸ್ಯರಿಬ್ಬರ – ಸದಸ್ಯತ್ವ ರದ್ದು



**ಸಿಹಿ ಕಹಿ ಸುದ್ದಿ,**
**ಉಟಕನೂರು** : ತಾಲೂಕಿನ ಉಟಕನೂರು ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷೆ ಕಾವೇರಿ ಹಾಗು ಹಾಲಿ ಅಧ್ಯಕ್ಷೆ ಈರಮ್ಮ ಅವರು 15 ನೇ. ಹಣಕಾಸು ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡ ಹಿನ್ನೆಲೆಯಲ್ಲಿ ದೂರಿನ ಆಧಾರದ ಮೇಲೆ ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಅವರು ಸದಸ್ಯತ್ವ ರದ್ದು ಮಾಡಿ ಆದೇಶ ಹೊರಡಿಸಿದ್ದಾರೆಂದು ಹೈದರಾಬಾದ್ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ತಾಲೂಕ ಅಧ್ಯಕ್ಷ ಎಂ.ಬಿ ನಾಯಕ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಉಟಕನೂರು ಗ್ರಾಮ ಪಂಚಾಯತಿ 2022–23 ನೇ. ಸಾಲಿನ 15 ನೇ. ಹಣಕಾಸು ಯೋಜನೆಯ ಸರಕಾರದ ನಿಯಮಗಳಂತೆ ಕಾಮಗಾರಿ ಮಾಡದೆ ಉಲ್ಲಂಘನೆ ಮಾಡಿದ್ದರಿಂದ ನಾವು ಹೋರಾಟ ಮಾಡಲಾಗಿತ್ತು. ಸರಕಾರದ ಅಧಿಕಾರಿಗಳು ಕಾನೂನು ಬದ್ಧವಾಗಿ ವರದಿ ಸಲ್ಲಿಸಿದ್ದರಿಂದ ಪಂಚಾಯತ್ ರಾಜ್ ಇಲಾಖೆಯ ಅಪರ ಕಾರ್ಯದರ್ಶಿ ಉಮಾ ಮಹಾದೇವನ್ ಅವರು ಆದೇಶ ಹೊರಡಿಸಿದ್ದರಿಂದ ನಮಗೆ ಕಾನೂನು ಮೇಲೆ ನಂಬಿಕೆ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾವೇರಿ ಗಂಡ ಗೋವಿಂದಪ್ಪ ಹಾಲಿ ಸದಸ್ಯರು ಹಾಗು ಪ್ರಸ್ತುತ ಅಧ್ಯಕ್ಷೆ ಈರಮ್ಮ ಗಂಡ ಅಮರಪ್ಪ ಅವರ ಸದಸ್ಯತ್ವ ರದ್ದು ಮಾಡುವುದರ ಜೊತೆಗೆ 6 ವರ್ಷಗಳ ಕಾಲ ಚುನಾವಣೆಗೆ ನಿಲ್ಲದಂತೆ ಆದೇಶ ಹೊರಡಿಸಿದ್ದಾರೆ. ಯಾವುದೇ ಪಂಚಾಯತಿ ಅಧಿಕಾರಿಗಳು ಈ ರೀತಿ ಮಾಡ ಬಾರದು ಎಂದು ಎಂ.ಬಿ ನಾಯಕ ಬಸವರಾಜು ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಸಾವಯವ ಕೃಷಿಯ ಹಾಗೂ ಗೊಬ್ಬರ ಉತ್ಪಾದನೆಯು ಮಹತ್ವವನ್ನು ಹೊಂದಿದೆ

**ಸಿಹಿ ಕಹಿ ಸುದ್ದಿ,**
**ನರೇಗಲ್ಲ** : ಸಮೀಪದ ಕೋಟುಮಚಗಿ ಗ್ರಾಮದ ಸಾವಯವ ಕೃಷಿಕ ಅವರೇ ನಮ್ಮ ನೆಚ್ಚಿನ ವೀರೇಶ ನೇಗಲಿಯವರು ಇವರು ಸಾವಯವ ಘಟಕ ಹಾಗೂ ಗೊಬ್ಬರ ಉತ್ಪಾದನ ಘಟಕಕ್ಕೆ ಈಚೆಗೆ ಭೇಟಿ ನೀಡಿದ ಕೋಟುಮಚಗಿಯ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಮಾಹಿತಿ ನೀಡಿದರು.

ಈ ಸಮಯದಲ್ಲಿ ಅವರು ಮಕ್ಕಳಿಗೆ ಸಾವಯವ ಕೃಷಿಯು ಅದು ಕೃಷಿ ಪ್ರಕ್ರಿಯೆಯಾಗಿದ್ದು, ಅಲ್ಲಿ ರಸ ಗೊಬ್ಬರಗಳ ಬಳಕೆ ಮತ್ತು ಕೀಟ ನಿಯಂತ್ರಣ ವಿಧಾನಗಳನ್ನು ಸಾವಯವ ವಸ್ತುಗಳಿಂದ ರಚಿಸಲಾಗಿದೆ ಅಥವಾ ಸ್ವಾಧೀನ ಪಡಿಸಿ ಕೊಳ್ಳಲಾಗುತ್ತದೆ. ಅಂತಹ ಪ್ರಕ್ರಿಯೆಯು ನಮ್ಮ ಪರಿಸರದ ಮೇಲೆ ಹಾನಿಕಾರಕ ಮತ್ತು ಅವಮಾನಕರ ಪರಿಣಾಮವನ್ನು ಜಾರಿ ಗೊಳಿಸುವುದಿಲ್ಲ. ಇಂತಹ ರೀತಿಯ ಕೃಷಿ ಪ್ರಕ್ರಿಯೆಯಲ್ಲಿ ತೊಡಗಿರುವ ಎಲ್ಲಾ ನಿರ್ವಾಹಕರು ಕಟ್ಟುನಿಟ್ಟಾದ ವಿವರಗಳನ್ನು ಅನುಸರಿಸುತ್ತಾರೆ, ಅದು ಮಾಲಿನ್ಯ ರಹಿತ ಕೃಷಿಯನ್ನು ಬೆಂಬಲಿಸುತ್ತದೆ ಮತ್ತು ಆ ಮೂಲಕ ಪರಿಸರ ವ್ಯವಸ್ಥೆ ಮತ್ತು ಅದರ ನಿವಾಸಿಗಳನ್ನು ಗೌರವಿಸುತ್ತದೆ.

ಸಾವಯವ ಕೃಷಿ ಹಾಗೂ ಗೊಬ್ಬರ ಉತ್ಪಾದನೆಯ ಪ್ರಾಮುಖ್ಯತೆಯ ಬಗ್ಗೆ ಬಹು ಮುಖ್ಯವಾದ ಮಾಹಿತಿಯಾದ ದೇಶಿ ಆಕಳಿನ ಸಗಣಿ ಗೊಬ್ಬರವನ್ನು ಒಂದೆಡೆ ವ್ಯವಸ್ಥಿತವಾಗಿ ಸಂಗ್ರಹಿಸಿ,



ವೈಜ್ಞಾನಿಕವಾಗಿ ಮಿಶ್ರಣ ಮಾಡಿ ನಂತರ ಹದ ಗೊಳಿಸಿ ಅದನ್ನು ಭೂಮಿಗೆ ಹಂತ ಹಂತವಾಗಿ ಹಾಕಿದರೆ ಉತ್ತಮ ಇಳುವರಿ ಪಡೆಯುಲ್ಲಿ ರೈತ ಯಶಸ್ವಿ ಯಾಗುತ್ತಾನೆ ಎಂದು ಸಾವಯವ ಕೃಷಿಕ ವೀರೇಶ ನೇಗಲಿ ಹೇಳಿದರು.

ಯಾವ ರೈತ ಭೂಮಿಯ ಹಿತವನ್ನು ಕಾಪಾಡಲು ಮುಂದಾಗುತ್ತಾನೋ ಅವನನ್ನು ಕಾಪಾಡಲು ಭೂಮಿತಾಯಿ ಮುಂದಾಗುತ್ತಾಳೆ. ಆದ್ದರಿಂದ ಪ್ರತಿಯೊಬ್ಬರು ಮಣ್ಣಿನ ಫಲವತ್ತತೆ ಕಾಪಾಡಿ ಕೊಳ್ಳಲು ಮುಂದಾಗಬೇಕು ಇಲ್ಲವಾದರೆ ಭೂಮಿ ಬಂಜರು ಆಗಲಿದೆ ಎಂದರು.

ಇಂದಿನ ದಿನಗಳಲ್ಲಿ ವಿಪರೀತವಾದ ರಾಸಾಯನಿಕ ಬಳಸಿ ಆಹಾರ ಉತ್ಪಾದನೆ ಮಾಡಿ ಘಟಕಕ್ಕೆ ಈಚೆಗೆ ಭೇಟಿ ನೀಡಿದ ಕೋಟುಮಚಗಿಯ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಉತ್ತಮ ಮಾಹಿತಿ ನೀಡಿದರು.

ಯಾವ ರೈತ ಭೂಮಿಯ ಹಿತವನ್ನು ಕಾಪಾಡಲು ಮುಂದಾಗುತ್ತಾನೋ ಅವನನ್ನು ಕಾಪಾಡಲು ಭೂಮಿತಾಯಿ ಮುಂದಾಗುತ್ತಾಳೆ. ಆದ್ದರಿಂದ ಪ್ರತಿಯೊಬ್ಬರು ಮಣ್ಣಿನ ಫಲವತ್ತತೆ ಕಾಪಾಡಿ ಕೊಳ್ಳಲು ಮುಂದಾಗಬೇಕು ಇಲ್ಲವಾದರೆ ಭೂಮಿ ಬಂಜರು ಆಗಲಿದೆ ಎಂದರು.

ಪ್ರಸುತ್ತ ದಿನಗಳಲ್ಲಿ ವಿಪರೀತವಾದ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಆಹಾರ ಉತ್ಪಾದನೆ ಮಾಡಿ ಮಕ್ಕಳಿಗೆ ಪ್ರತಿದಿನ ಪ್ರೀತಿಯಿಂದ ತಿನ್ನಿಸುವ ಪ್ರತಿ ತಾಯಿಯ ಕೈ ತುತ್ತು ವಿಷವಾಗಿದೆ. ಹಾಗಾಗಿ ಮಕ್ಕಳು ದೈಹಿಕವಾಗಿ ಮಾನಸಿಕವಾಗಿ ರೋಗಿ ಗಳಾಗುತ್ತಿದ್ದಾರೆ ಇಂದಿನ ಕೃಷಿ ಚಟುವಟಿಕೆಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತವೆ ಆದ್ದರಿಂದ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸ ಬೇಕೆಂದರೆ ರಾಸಾಯನಿಕ ಕೃಷಿ ಬಿಟ್ಟು ಸಾವಯವ ಕೃಷಿಗೆ ಮರಳುವ ಅನಿವಾರ್ಯತೆ ಇದೆ ಎಂದರು.

ಈ ವೇಳೆ ಮಕ್ಕಳು ಸಗಣಿಯನ್ನು ಉತ್ತಮ ಗೊಬ್ಬರ ವನ್ನಾಗಿಸುವ ವಿಧಾನ, ಗೊಬ್ಬರವನ್ನು ಹೊಲಕ್ಕೆ ಯಾವ ರೀತಿಯಲ್ಲಿ ಹಾಕ ಬೇಕೆನ್ನುವ ವಿಧಾನ, ಫಲವತ್ತಾದ ಹಾಗೂ ರಾಸಾಯನಿಕ ಮಣ್ಣಿನ ವ್ಯತ್ಯಾಸ, ದೇಶಿ ಆಕಳಿನ ಮಹತ್ವದ ಕುರಿತು ಮಾಹಿತಿ ಪಡೆದರು. ಈ ಸಮಯದಲ್ಲಿ ಶಿಕ್ಷಕರಾದ ಎಂ.ಎ ಹಿರೇಗೌಡ್ರ, ಬಿ.ರಾಜು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ.ರೋಣ ಗದಗ**

## ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಸಮಿತಿಯಿಂದ – ಸಚಿವ ಎಂ.ಬಿ ಪಾಟೀಲರಿಗೆ ಮನವಿ

**ಸಿಹಿ ಕಹಿ ಸುದ್ದಿ,**
**ವಿಜಯಪುರ** : ಬೃಹತ ಮತ್ತು ಮಧ್ಯಮ ಕೈಗಾಯಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ವಿಜಯಪೂರ ಜಿಲ್ಲೆಯ ಭಗೀರತ ಎಂದು ಹೆಸರು ಪಡೆದ ನಮ್ಮ ಜಿಲ್ಲೆಯ ಬೃಹತ್ ಮತ್ತು ಮದ್ಯಮ ಕೈಗಾರಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಎಂ.ಬಿ ಪಾಟೀಲರಲ್ಲಿ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕ ಅಧ್ಯಕ್ಷರು ಮತ್ತು ಕಾರ್ಯಕರ್ತರಿಂದ ಮನವಿ ಸಲ್ಲಿಸಿದರು. 1) ಬೂದಿಹಾಳ ಬೀರಾಪೂರ ಏತ ನೀರಾವರ ತರಿತಗತಿಯಲ್ಲಿ ಪೂರ್ಣ ಗೊಳಿಸಬೇಕು ಮತ್ತು 75 ಎಕರೆಗೆ ಒಂದು ನೀರು ಸರಬರಾಜು ಚನಲ್ ಬಾಕ್ಸ್ (ಡಬ್ಬಿ) ಕೂಡಿಸಿದು ಸದರಿ ಸರಿಯಾಗಿ ನೀರು ಪೊರೈಕೆಯಾಗುತ್ತಿಲ್ಲಾ ಆದ ಕಾರಣ ತಾವೂಗಳು 25 ರಿಂದ 30 ಎಕರೆಗೆ ಒಂದರಂತೆ ಕೊಡಿಸ ಬೇಕು.

2) FIC ಒಡರ ಕರೆದು ಬೇಗನೆ ಕಾಲುವೆ ನಿರ್ಮಾಣ ಮರಡಿ ರೈತರ ಜಮೀನಿಗೆ ನೀರು ಪೂರೈಸಬೇಕು

3) ಬೆಕಿನಾಳ ಮತ್ತು ಅಸ್ತಿ ಗ್ರಾಮ ಪಂಚಾಯತಿಯಲ್ಲಿ ಬರುವ ಕರೆಗಳಿಗೆ ನೀರು ತುಂಬಿಸಬೇಕು ಮತ್ತು ಜನ ಜನವಾರುಗಳಿಗೆ



ಕುಡಿಯುವು ನೀರಿನ ಅನುಕೂಲ ಮಾಡಿ ಕೊಂಡಬೇಕು

4) ಅಗ್ನಿಯಿಂದ ಕಲಕೇರಿವರೆಗೆ ರಸ್ತೆ ಡಾಂಬರೀಕರಣವನ್ನು ತ್ವರಿತ ಗತಿಯಲ್ಲಿ ಮಾಡಿ ಕೊಡಬೇಕು.

5) ಎಲ್ಲಾ ರೈತರಿಗೆ ತಾಳಿಕೋಟಿ ಕೃಷಿ ಕೇಂದ್ರದಲ್ಲಿ ಸ್ಪೀಕರ್ ಪೈಪು ನೀಡುವಂತೆ ಅಧಿಕಾರಿಗಳಿಗೆ ಆದೇಶ. ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಈಡೇರಿಸಬೇಕುಅಂತಾನಂಬಿಕೆಯಿಂದತಮ್ಮಲ್ಲಿ ವಿನಂತಿ ಪೂರ್ವಕವಾಗಿ ಬೆಕಿನಾಳ ಮತ್ತು ಆಸ್ತಿ ರೈತರ ಕಳಕಳಿಯ ವಿನಂತಿಸಿ ಕೊಳ್ಳುತ್ತೀರುವ ತಾಳಿಕೋಟೆ ತಾಲೂಕಿನ ಅಧ್ಯಕ್ಷರು ಶ್ರೀಶೈಲ್ ವಾಲಿಕಾರ್ ಕಲ್ಕೇರಿ ಹೋಬಳಿ ಅಧ್ಯಕ್ಷರು ಮೈಬೂಬಬಾಷಾ ಮನಗೂಳಿ. ವಾಲಿಕಾರ್ ತಾಲೂಕ ಯುವ ಮೋರ್ಚಾ ಅಧ್ಯಕ್ಷರು ಗೌಡಪ್ಪಗೌಡ ಹಳಿಮನಿ ಅಸ್ಕಿ ಸಂಚಾಲಕರು ಮೈಬೂಬ್ ಗೋಬರಡಗಿ ಗ್ರಾಮ ಘಟಕ ಅಧ್ಯಕ್ಷರು ಸಂಗನಗೌಡ ಬಿರಾದಾರ್ ಯಂಕಪ್ಪ ಗುತ್ಯಾಳ ಗ್ರಾಮ ಘಟಕ ಉಪಾಧ್ಯಕ್ಷರು ಶರ–ಣಗೌಡ ಕೋಣಾಳ್ ಅಸ್ಕಿ ಸಿದ್ದನಗೌಡ ಟಕ್ಕಳಕಿ ಶಿವು ಹೂಗಾರ್ ಮುತ್ತು ಹೂಗಾರ್ ಇತರರು ಇದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ. ತಾಳಿಕೋಟೆ**

## ಮಕ್ಕಳು ಸ್ವರ್ಧಾತ್ಮಕ ಮನೋಭಾವನೆ ಬೆಳೆಸಿಕೊಳ್ಳಿ

**ಜಮಖಂಡಿ** : ಹಿರಿಯರಿಗೆ, ಕಲಿಸಿದ ಶಿಕ್ಷಕರಿಗೆ ಮತ್ತು ಹೆತ್ತ ತಂದೆ ತಾಯಿಗಳಿಗೆ ಗೌರವ ನೀಡಬೇಕು. ವಿದ್ಯಾರ್ಥಿ ಜೀವನದಲ್ಲಿ ಮಕ್ಕಳು ಸ್ಪರ್ಧಾತ್ಮಕ ಮತ್ತು ಕ್ರೀಡಾ ಮನೋಭಾವನೆಯನ್ನು ಹೊಂದಿರಬೇಕೆಂದು ಹುನ್ನೂರ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ. ಕಾಳಿಂಗ ಗೊಳಸಂಗಿ ಹೇಳಿದರು.



ನಗರದ ಬಾಲಕರ ಸರಕಾರಿ ಪ. ಭಾ. ಪದವಿ ಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಸರ್ಮೋತ್ತಮ ಗಲಗಲಿ ಉದ್ಘಾಟಿಸಿದರು. ಪ್ರಾಚಾರ್ಯ ಸುರೇಶ ಬಿರಾದಾರ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರಾದ ಬಿ. ಎಸ್. ಭಾಗೋಜಿ, ರಾಜಕುಮಾರ ಗವಳಿ, ಅಶೋಕ ರಾಮದುರ್ಗ ನಿವೃತ್ತ ಉಪನ್ಯಾಸಕ ಸಂಗಮೇಶ ಕುಬಕಡ್ಡಿ, ದರ್ಶನ ಆಲಗೂರ, ಈರಪ್ಪ ಸುತಾರ, ಪ್ರಧಾನ ಕಾರ್ಯದರ್ಶಿ ಸಿದ್ದನಗೌಡ ನ್ಯಾಮಗೌಡ, ಸುನೀಲ ಕೋರೆ, ಶಂಕರ ಸಂಗಾನಟ್ಟಿ, ಶ್ರೀಕಾಂತ ಮಾದರ, ಸಂದೀಪ ಬಾಬರ, ತುಕಾರಾಮ ಪೋತೆಗೋಳ, ಹಣಮಂತ ಕಾಂಬಳೆ, ಶ್ರೀದೇವಿ ಪಾಟೀಲ, ಸ್ವಾತಿ ಬಿರಾದಾರ ಸಹಿತ ಹಲವರು ಉಪಸ್ಥಿತರಿದ್ದರು.

ಭವಾನಿ ಗುಗ್ಗರಿ ಪ್ರಾರ್ಥಿಸಿದರು. ಸಿ. ಎಸ್. ಜನಗೊಂಡ ಸ್ವಾಗತಿಸಿದರು. ಡಾ. ಲಿಂಗಾನಂದ ಗವಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ. ಎಸ್. ಪೂಜಾರಿ ಪರಿಚಯಿಸಿದರು. ಉಪನ್ಯಾಸಕಿ ವಿಮಲಾ ಬೊಮ್ಮನಹಳ್ಳಿ ವರದಿ ವಾಚಿಸಿದರು. ಉಪನ್ಯಾಸಕಿ ಪ್ರತಿಭಾ ನಾಯ್ಕ ಸೊಗಸಾಗಿ ನಿರೂಪಿಸಿದರು. ಸುನೀತಾ ಗುಡ್ಡಿ ವಂದಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಉದ್ಘಾಟಿಸುವ ಮೂಲಕ ಪ್ರದೀಪ ಮೆಟಗುಡ್ಡ ಅವರಿಗೆ ಸಂಘದ ಜವಾಬ್ದಾರಿಯನ್ನು ವಹಿಸಲಾಯಿತು.

## ಜೀವನದ ಪ್ರತಿಹಂತದಲ್ಲಿ ಗಣಿತ ಅತ್ಯವಶ್ಯಕ: ಸಿಇಓ ಶಶಿಧರ ಕುರೇರ

**ಜಮಖಂಡಿ** : ಜೀವನದ ಪ್ರತಿಹಂತದಲ್ಲಿ ಬದುಕು ರೂಪಿಸಿಕೊಳ್ಳಲು, ಸಮಸ್ಯೆಗಳ ಪರಿಹಾರಕ್ಕೆ, ನಿರ್ಧಾರಗಳನ್ನು ತೆಗೆದುಕೊಳ್ಳಲು, ಆಟ ಪಾಠ ಸಹಿತ ಎಲ್ಲ ಹಂತದಲ್ಲಿ ಗಣಿತ ಅವಶ್ಯಕವಾಗಿದೆ ಎಂದು ಜಿಲ್ಲಾ ಪಂಚಾಯತ್ ಸಿಇಓ ಶಶಿಧರ ಕುರೇರ್ ಹೇಳಿದರು.

ತಾಲೂಕಿನ ಸಿದ್ದಾಪೂರ ಗ್ರಾಮದ ಪುಷ್ಪಾತಾಯಿ ಕನ್ನಡ ಮಾಧ್ಯಮ ಮತ್ತು ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಪಂಚಾಯತ್ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಪ್ರೌಢ ಶಾಲೆಗಳ ಗಣಿತ ಶಿಕ್ಷಕರಿಗೆ ಸಾಮರ್ಥ್ಯ ವೃದ್ಧಿಸುವ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಗಣಿತ ವಿಷಯ ಮಾತ್ರವಲ್ಲ ಅದು ಜೀವನದ ಅವಿಭಾಜ್ಯ ಅಂಗ. ಜೀವನ ಸಾರ್ಥಕವಾಗಬೇಕಾದರೆ ಎಲ್ಲರೂ ಗಣಿತವನ್ನು ಕಲಿಯಬೇಕು. ಕಲಿಸುವವರು ಕಲಿಕೆಯಲ್ಲಿ ಹಿಂದುಳಿದ ಮಕ್ಕಳು ಉತ್ತೀರ್ಣರಾಗುವಂತೆ ಮಾಡುವದು ಮುಖ್ಯವಾಗಿದೆ. ಗಣಿತದಲ್ಲಿ ಮಕ್ಕಳಲ್ಲಿ ಆಸಕ್ತಿ ಮೂಡುವಂತೆ ಶಿಕ್ಷಕರು ಕಲಿಸಬೇಕು. ತಂತ್ರಜ್ಞಾನ ಬಳಸಿಕೊಂಡು ಮಕ್ಕಳಿಗೆ ಮನವರಿಕೆಯಾಗುವಂತೆ ತಿಳಿಹೇಳಬೇಕು. ಶಾಲೆಗಳಲ್ಲಿ ಗಣಿತ ಕಷ್ಟದ ವಿಷಯ ಎಂದು ವಿದ್ಯಾರ್ಥಿಗಳು ಹೇಳದಂತೆ ನೋಡಿಕೊಳ್ಳುವ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದರು.

ಜಿಲ್ಲೆಯ ಹತ್ತನೇ ತರಗತಿ ಫಲಿತಾಂಶ ಸುಧಾರಿಸಬೇಕು. ಹದಿಮೂರನೇ ಸ್ಥಾನದಲ್ಲಿರುವ ಜಿಲ್ಲೆಯನ್ನು ಕನಿಷ್ಟ ಹತ್ತನೇ ಸ್ಥಾನಕ್ಕೆ ತರುವಲ್ಲಿ ಎಲ್ಲ ಶಿಕ್ಷಕರು ಶ್ರಮ ವಹಿಸಬೇಕು. ಶಿಕ್ಷಣಾಧಿಕಾರಿ ಎ. ಕೆ. ಬಸಣ್ಣವರ ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಜಾರಿಗೆ ತಂದು ವಿದ್ಯಾರ್ಥಿಗಳು ಹಾಗೂ ಶಿಕ್ಷಕರಲ್ಲಿ ಜಾಗೃತಿ ಮೂಡಿಸಿ ಫಲಿತಾಂಶ ಹೆಚ್ಚಿಸಲು ಶ್ರಮ ಸಾಲದು. ಶಿಕ್ಷಕರ ಸಹಕಾರವು ಅಗತ್ಯವಾಗಿದೆ. ಶಿಕ್ಷಕರು ಸಿದ್ಧತೆ ಮಾಡಿಕೊಂಡು ಪಾಠಗಳನ್ನು ಹೇಳಬೇಕು. ಕೇವಲ ಅಂಕಿ ಅಂಶಗಳನ್ನು ನೀಡುವದು ಬೇಡ. ಉತ್ತಮ ಫಲಿತಾಂಶ ಬೇಕು. ನೂರಕ್ಕೆ ನೂರರಷ್ಟು ಫಲಿತಾಂಶ ತಂದು ಕೊಟ್ಟರೆ ಜಿಲ್ಲೆಯ ಎಲ್ಲಾ ಗಣಿತ ಶಿಕ್ಷಕರಿಗೂ ಇಲಾಖೆಯಿಂದ ಸನ್ಮಾನಿಸಲಾಗುವುದು ಎಂದರು.

ಡಿಡಿಪಿಐ ವಿವೇಕಾನಂದ ಮಾತನಾಡಿ, ಎಸ್. ಎಸ್.ಎಲ್. ಸಿ. ಫಲಿತಾಂಶ ಚೆನ್ನಾಗಿ ಬರಬೇಕು ಎಂದು ಶಿಕ್ಷಣ ಇಲಾಖೆ, ಶಿಕ್ಷಕರಿಗೆ



ವಿದ್ಯಾರ್ಥಿಗಳಿಗೆ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುತ್ತಿದೆ.

ಗಣಿತ ವಿಷಯದಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚು ತರಬೇತಿ ನೀಡಬೇಕು. ಜಿಲ್ಲಾಧಿಕಾರಿಗಳು, ಸಿಇಓ ಅವರು ಹೆಚ್ಚಿನ ಕಾಳಜಿ ವಹಿಸಿ ಜಿಲ್ಲೆಯ ಶಿಕ್ಷಣ ಮಟ್ಟ ಸುಧಾರಣೆಗೆ ಬಹಳಷ್ಟು ಸಹಕಾರ ನೀಡುತ್ತಿದ್ದು, ಎಲ್ಲರೂ ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. 36 ಸಾವಿರ ವಿದ್ಯಾರ್ಥಿಗಳ ಪೈಕಿ ಕೇವಲ 34 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದು, ಉಳಿದ ಎರಡು ಸಾವಿರ ಮಕ್ಕಳು ಏಕೆ ಪರೀಕ್ಷೆ ಬರೆಯುತ್ತಿಲ್ಲ ಎಂಬುದನ್ನು ಅರಿತುಕೊಂಡು ಅಗತ್ಯ ಕ್ರಮ ಜರುಗಿಸಿ ಪರೀಕ್ಷೆ ಬರೆಯಲು ಪ್ರೋತ್ಸಾಹಿಸಬೇಕು ಎಂದರು.

ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಧರ್ಮಲಿಂಗಯ್ಯ ಗುಡಗುಂಟಿ ಮಾತನಾಡಿ, ಶಿಕ್ಷಣಕ್ಕೆ ಪ್ರತಿಯೊಬ್ಬರು ಮಹತ್ವ ನೀಡಬೇಕು. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡಲ್ಲಿ ಸುಲಭ ಕಲಿಕೆಗೆ ಅವಕಾಶವಿದೆ. ಮಕ್ಕಳಲ್ಲಿ ಕಲಿಕೆಯ ಅಭಿರುಚಿ ಮೂಡುವಂತೆ ಶಿಕ್ಷಕರು ಕಲಿಸಿದಾಗ ಮಾತ್ರ ಮಕ್ಕಳ ಭವಿಷ್ಯ ಸಮೃದ್ಧವಾಗಲಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎ. ಕೆ. ಬಸಣ್ಣವರ ಮಾತನಾಡಿದರು. ವೇದಿಕೆಯಲ್ಲಿ ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆ ಆಡಳಿತಾಧಿಕಾರಿ ಪ್ರೊ. ವೈ. ಬಿ. ಹೊಟ್ಟಿ, ನಿರ್ದೇಶಕಿ ಪಾರ್ವತಿ ಗುಡಗುಂಟಿ, ಪಾಚಾರ್ಯ ಕೆ. ವೈ. ಭೂತಾಳಿ, ನಿರ್ದೇಶಕ ಎಸ್. ಎಸ್. ಹೂಲಿ, ತಾಲೂಕು ಪಂಚಾಯತ್ ಸಿಇಓ ಸಂಜೀವ ಜುನ್ನೂರ, ಎಸ್. ಎಚ್. ಹಾಲನವರ, ಎಸ್. ಎಂ. ಹಲ್ಯಾಳ ಸಹಿತ ಹಲವರು ಆಸೀನರಾಗಿದ್ದರು. ಕಾರ್ಯಾಗಾರದಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದ್ದರು.

ಕುಡಿಯುವ ನೀರಿನ ಕಾಮಗಾರಿ ಪ್ರಗತಿಯಲ್ಲಿದೆ.

ತಾಲೂಕಿನ ಹಿಪ್ಪರಗಿ ಜಲಾಶಯದಿಂದ ಜಮಖಂಡಿ ಮತ್ತು ರಬಕವಿ–ಬನಹಟ್ಟಿ ತಾಲೂಕುಗಳ ಪ್ರತಿ ಮನೆ–ಮನೆಗೆ ಕುಡಿಯುವ ನೀರು ಪೂರೈಸುವ ಕಾಮಗಾರಿ ಪ್ರಗತಿ ಹಂತದಲ್ಲಿದೆ ಎಂದು ಸಿಇಓ ಶಶಿಧರ ಕುರೇರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮಖಂಡಿ ಹಾಗೂ ರಬಕವಿ ಬನಹಟ್ಟಿ ತಾಲೂಕಿನ ಪ್ರತಿ ಗ್ರಾಮಗಳಿಗೆ ಕೃಷ್ಣಾನದಿ ನೀರನ್ನು ಪೂರೈಸುವ 350 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಗೊಂಡಿದ್ದ ಕಾಮಗಾರಿ ಪ್ರಗತಿಯಲ್ಲಿದ್ದು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಳ್ಳಲಿದೆ. ಕಾಮಗಾರಿಯ ಪರಿಶೀಲನೆ ನಡೆಸಿ ಸಮಯಕ್ಕೆ ಸರಿಯಾಗಿ ಕೆಲಸ ಪೂರ್ಣಗೊಳಿಸಲು ಸೂಚಿಸಲಾಗಿದೆ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಒಂದು ವಿಷಯದ ಬಗ್ಗೆ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕಾರ್ಯಾಗಾರದ ಮೂಲಕ ಹತ್ತನೇ ತರಗತಿಯ ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಲಾಗಿದೆ. ನುರಿತ ತಜ್ಞರಿಂದ ಶಿಬಿರಗಳನ್ನು ನಡೆಸಲಾಗುತ್ತಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಎಂಟು ಹಾಗೂ ಒಂಭತ್ತನೇ ತರಗತಿಯ ವಿದ್ಯಾರ್ಥಿಗಳಿಗೂ ಕಲಿಕೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ. ಈ ಮೂಲಕ ಹತ್ತನೇ ತರಗತಿ ಫಲಿತಾಂಶ ಸುಧಾರಣೆ ಆಗಲಿದೆ ಎಂದರು.

ಇದೇ ಸಂದರ್ಭದಲ್ಲಿ ತಾಪಂ ಸಿಇಓ ಸಂಜೀವ ಜುನ್ನೂರ, ಬಿಇಓ ಅಶೋಕ ಬಸಣ್ಣವರ ಸಹಿತ ಹಲವರು ಇದ್ದರು.

## ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಗಮನ ಸೆಳದ ಬೃಹತ್ ಗಾತ್ರದ ಗಾಳಿಪಟಗಳ ಪ್ರದರ್ಶನ

# ಗವಿಮಠದ ಬಾನಂಗಳದಲ್ಲಿ ಬಣ್ಣ-ಬಣ್ಣದ ಪಥಂಗಗಳ ಹಾರಾಟ

**ಕೊಪ್ಪಳ :** ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಗವಿಮಠದ ಬಾನಂಗಳದಲ್ಲಿ ಬಣ್ಣ-ಬಣ್ಣದ ಪಥಂಗಗಳು ಹಾರಾಡಿ ಸಾರ್ವಜನಿಕರ ಗಮನ ಸೆಳೆದವು.



2025ರ ಗವಿಶ್ರೀ ಕ್ರೀಡಾ ಉತ್ಸವದ ಭಾಗವಾಗಿ ಶುಕ್ರವಾರ ಶ್ರೀ ಗವಿಮಠ ಆವರಣದಲ್ಲಿ ಜರುಗಿದ ಬೃಹತ್ ಗಾತ್ರದ ಗಾಳಿಪಟಗಳ ಪ್ರದರ್ಶನದಲ್ಲಿ ಓಡಿಸ್ಸಾ, ಗುಜರಾಜ, ಕೇರಳ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಮತ್ತು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಯ ತಂಡಗಳು ಭಾಗವಹಿಸಿ, ಹುಲಿ, ಚಿರತೆ, ಕುದರೆ, ಮೀನು ಹಾಗೂ ಇತರೆ ಮಾದರಿಯ ವಿಭಿನ್ನ ಗಾಳಿಪಟಗಳನ್ನು ಹಾರಿಸಿ ಜನರ ಆಕರ್ಷಣೆಯನ್ನು ಸೆಳೆದವು. ಮಕ್ಕಳು ಹಾಗೂ ಸಾರ್ವಜನಿಕರು ರಂಗು ರಂಗಿನ ಗಾಳಿಪಟಗಳ ಹಾರಾಟವನ್ನು ನೋಡಿ ಚಪ್ಪಾಳೆ ತಟ್ಟಿ ಖುಷಿಪಟ್ಟರು.

ಗಾಳಿಪಟಗಳ ಪ್ರದರ್ಶನ ಸ್ಥಳಕ್ಕೆ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ ಅವರು ಭೇಟಿ ನೀಡಿ, ಬಳಿಕ ಮಾತನಾಡಿ, ಗಾಳಿಪಟ ಉತ್ಸವವನ್ನು ಕೊಪ್ಪಳಕ್ಕೆ ಪರಿಚಯಿಸುವ ಉದ್ದೇಶದಿಂದ ಬೃಹತ್ ಗಾತ್ರದ ಗಾಳಿಪಟಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಗಾಳಿಪಟ ಪ್ರದರ್ಶನಗಳು ಹೆಚ್ಚಾಗಿ ಸಮುದ್ರ ತೀರದ ಪ್ರದೇಶಗಳಲ್ಲಿ ನಡೆಯುತ್ತದೆ. ಅಂತಹ ಉತ್ಸವಗಳಿಗೆ ಹೋಗಲಾಗದ ನಮ್ಮ ಗ್ರಾಮೀಣ ಭಾಗದ ಜನರಿಗೆ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಗಾಳಿಪಟಗಳ ಪ್ರದರ್ಶನವನ್ನು ವೀಕ್ಷಿಸುವ ಅವಕಾಶ ಕಲ್ಪಿಸಲಾಗಿದೆ. ಈ ಪ್ರದರ್ಶನದಲ್ಲಿ ಗುಜರಾತ, ಓಡಿಸ್ಸಾ, ಕೇರಳ ಮತ್ತು ನಮ್ಮ ಕರ್ನಾಕಟ ರಾಜ್ಯದ ತಂಡಗಳು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದವರು ಸಹ ಪಾಲ್ಗೊಂಡಿದ್ದಾರೆ. ರಾತ್ರಿಯೂ ಸಹ ಎಲ್.ಇ.ಡಿ ಗಾಳಿಪಟಗಳ ಪ್ರದರ್ಶನವು ನಡೆಯಲಿದ್ದು, ಸಾರ್ವಜನಿಕರು ಇದನ್ನು ವೀಕ್ಷಿಸಿ ಆನಂದಿಸಬಹುದಾಗಿದೆ ಎಂದು ಹೇಳಿದರು. ಭಾರತದ ಕೈಟ್ ಮ್ಯಾನ್ ಎಂದೇ ಪ್ರಸಿದ್ಧರಾದ ವಿ.ಕೃಷ್ಣಜಿ ರಾವ್ ಅವರು ಮಾತನಾಡಿ, ಗಾಳಿಪಟಗಳನ್ನು ಮೊದಲು ಬಿದಿರಿನ ಮೂಲಕ ತಯಾರಿಸಿ ಹಾರಿಸುತ್ತಿದ್ದೇವು. ಈಗ ವಿಭಿನ್ನ ರೂಪದ ಬಟ್ಟೆಗಳಲ್ಲಿ ಸಿದ್ಧಪಡಿಸಿ ಹಾರಿಸಲಾಗುತ್ತಿದೆ. ಫೈಲೆಟ್ ಕೈಟ್, ಹುಲಿ, ಕುದರೆ, ಮೀನು, ಹಸು, ಆಮೆ ಹೀಗೆ ಹಲವಾರು ಬಗೆಯ ಗಾಳಿಪಟಗಳನ್ನು ಮಾಡಿ ಹಾರಿಸಲಾಗುತ್ತಿದೆ. ಜಾತ್ರೆಯಲ್ಲಿ ಗಾಳಿಪಟ ಉತ್ಸವ ಹಮ್ಮಿಕೊಳ್ಳುವುದರಿಂದ ಹೆಚ್ಚಿನ ಜನರಿಗೆ ಮನರಂಜನೆ ಸಿಗುತ್ತದೆ. ಗವಿಸಿದ್ದೇಶ್ವರ ಜಾತ್ರೆಯಲ್ಲಿ ಗಾಳಿಪಟಗಳ ಪ್ರದರ್ಶನ ಹಮ್ಮಿಕೊಂಡಿರುವುದರಿಂದ ಜನರು ತುಂಬಾ ಉತ್ಸಾಹದಿಂದ ಇವುಗಳ ವೀಕ್ಷಣೆ ಮಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ ಸೇರಿದಂತೆ ವಿವಿಧ ರಾಜ್ಯ ಮತ್ತು ಜಿಲ್ಲೆಗಳಿಂದ ಆಗಮಿಸಿದ ಗಾಳಿಪಟಗಳನ್ನು ಹಾರಿಸುವ ತಂಡಗಳ ಸದಸ್ಯರು, ವಿವಿಧ ಇಲಾಖೆಗಳ ಅಧಿಕಾರಿಗಳು, ದೈಹಿಕ ಶಿಕ್ಷಕರು, ವಿವಿಧ ಶಾಲಾ ಕಾಲೇಜುನ ಮಕ್ಕಳು ಸೇರಿದಂತೆ ಹಲವಾರು ಜನರು ಉಪಸ್ಥಿತರಿದ್ದರು.

## ದೆಹಲಿ ಗಣರಾಜ್ಯೋತ್ಸವಕ್ಕೆ ವಿಶೇಷ ಅತಿಥಿಯಾದ ಕಿನ್ನಾಳ ಗ್ರಾ.ಪಂ ಅಧ್ಯಕ್ಷೆ ಶ್ವೇತಾ ರಾಘವೇಂದ್ರ ಡಂಬಳ

**ಕೊಪ್ಪಳ :** ಗಣರಾಜ್ಯೋತ್ಸವ ದಿನಾಚರಣೆ ಇದೆ ದಿನ 26ರಂದು ದೆಹಲಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಗಣರಾಜ್ಯೋತ್ಸವದ ವಿಶೇಷ ಅತಿಥಿಯಾಗಿ ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಶ್ವೇತಾ ರಾಘವೇಂದ್ರ ಡಂಬಳ ಆಯ್ಕೆಯಾಗಿದ್ದಾರೆ

ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಕಿನ್ನಾಳ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಅವಕಾಶ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ, ಸುಮಾರು 750 ಜನ ವಿಶೇಷ ಪ್ರತಿನಿಧಿಯನ್ನು ಕೇಂದ್ರ ಸರ್ಕಾರ ಆಹ್ವಾನಿಸಿದ್ದು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಪತ್ರ ಬರೆದು ತಿಳಿಸಿದ್ದಾರೆ ಅದರಂತೆ ನಮ್ಮ ರಾಜ್ಯದಿಂದ 12 ಜನರನ್ನು ಆಯ್ಕೆ ಮಾಡಲಾಗಿದ್ದು ಅದರಲ್ಲಿ ನಮ್ಮ ಕಿನ್ನಾಳಗ್ರಾಮ ಪಂಚಾಯಿತಿ ಅಧ್ಯಕ್ಷರು ಒಬ್ಬರು, ಇದು ನಮ್ಮ ಕೊಪ್ಪಳ ಜಿಲ್ಲೆಗೆ ಹೆಮ್ಮೆ ತರುವಂತ ವಿಷಯವಾಗಿದೆ ,ಈಗಾಗಲೇ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಸದರಿ ಅವರನ್ನು ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿದೆ ಇವರು ನವ ದೆಹಲಿ ಯಲ್ಲಿ ಜರುಗುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ವಿಶೇಷ ಅತಿಥಿ ಪ್ರತಿನಿಧಿಯಾಗಿ ಪಾಲ್ಗೊಳ್ಳಲಿದ್ದಾರೆ ,ಅವರೊಂದಿಗೆ ಅವರ ಪತಿ ರಾಘವೇಂದ್ರ ಡಂಬಳ ಕೂಡ ಪಾಲ್ಗೊಳ್ಳುವವರು. ದೆಹಲಿಯ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ವೇತಾ ರಾಘವೇಂದ್ರ ಡಂಬಳ ಆಯ್ಕೆ ಕೊಂಡಿರುವುದಕ್ಕೆ ಕಿನ್ನಾಳ ಗ್ರಾಮದ ವಿವಿಧ ಸಂಘಟನೆಗಳು ಪಂಚಾಯಿತಿಯ ಜನ ಪ್ರತಿನಿಧಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್‌ಗೆ ಆಹ್ವಾನ



**ಕೊಪ್ಪಳ :** ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ನೂತನರಾಷ್ಟ್ರೀಯಮಟ್ಟದಸಂಘಟನೆಯಉದ್ಘಾಟನೆ ಹಾಗೂ ವಿಶ್ವ ರೈತ ದಿನಾಚರಣೆ ಮತ್ತು ರಾಜ್ಯ ರೈತರ ಮಹಾಸಮಾವೇಶದಲ್ಲಿಪಾಲ್ಗೊಳ್ಳುವಂತೆಮತ್ತುಪ್ರಶಸ್ತಿ ಸ್ವೀಕರಿಸುವಂತೆ ಕೊಪ್ಪಳ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್ ರವರಿಗೆ ಕೊಪ್ಪಳದಲ್ಲಿ ಸಂಘಟಕರು ಭೇಟಿ ಮಾಡಿ ಆಹ್ವಾನ ಪತ್ರಿಕೆ ನೀಡಿದರು ಅಲ್ಲದೆ ರಾಜ್ಯಮಟ್ಟದಸೇವಾರತ್ನಪ್ರಶಸ್ತಿಕೂಡಸ್ವೀಕರಿಸುವಂತೆ ಸಂಘಟಕರು ಮನವಿ ಮಾಡಿಕೊಂಡರು. ಇದೇ ತಿಂಗಳ 21ರಂದು ಮಂಗಳವಾರ ಬೆಳಿಗ್ಗೆ ಜಿಲ್ಲೆಯ ಕುಕನೂರು ಪಟ್ಟಣದ ಶ್ರೀ ಮುಂಡರಗಿ ಅನ್ನದಾನಿಶ್ವರ ಶಾಖಾ ಮಠ ದಲ್ಲಿ ಅಮ್ಜದ್ ಪಟೇಲ್ ರವರಿಗೆ ಪ್ರಶಸ್ತಿ ಪ್ರಧಾನ ಮಾಡಿ ಸತ್ಕರಿಸಲಾಗುವುದು ಎಂದು ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ರಾಷ್ಟ್ರೀಯ ಅಧ್ಯಕ್ಷರಾದ ಎಂ ಎನ್ ಕುಕನೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ, ಈ ಸಂದರ್ಭದಲ್ಲಿ ಕಾರ್ಯಕ್ರಮ ಸಂಘಟಕ ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘದ ರಾಷ್ಟ್ರೀಯ ಅಧ್ಯಕ್ಷ ಎಂ ಎನ್ ಕುಕನೂರ್ ಸೇರಿದಂತೆ ಈ ಸಂದರ್ಭದಲ್ಲಿ ಕಾರ್ಯಕ್ರಮ ಸಂಘಟನೆ ಹಾಗೂ ಸಂಘದ ಪದಾಧಿಕಾರಿಗಳಾದ ಜಿಲ್ಲಾಧ್ಯಕ್ಷ ಮಹಬೂಬ್ ಮಾಳೆಕೊಪ್, ಜಿಲ್ಲಾ ಉಪಾಧ್ಯಕ್ಷರಾದ ಬಸವರಾಜ್ ಅಡವಿ ಸದಸ್ಯರಾದ ಚಂದ್ರಕಾಂತ್ ಗುಡಿಮನಿ ಜಿಲ್ಲಾ ಕಾರ್ಯದರ್ಶಿ ಹನುಮೇಶ ಹಾಗೂ ಜಿಲ್ಲಾ ಕಾರ್ಯಾಧ್ಯಕ್ಷ ಪಿಡನ ಗೌಡ್ರು ಸೇರಿದಂತೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದು, ಅಮ್ಜದ್ ಪಟೇಲ್ ರವರಿಗೆ ಪ್ರಶಸ್ತಿ ಲಭಿಸಿರೋದಕ್ಕೆ ಅವರ ಅಭಿಮಾನಿ ವರ್ಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ಮಹಾಯೋಗಿ ವೇಮನ ಜಯಂತಿ

# ಸಮಾಜದ ಏಳಿಗೆಗಾಗಿ ವೇಮನರ ತತ್ವಾದರ್ಶಗಳು ಎಲ್ಲರಿಗೂ ಮಾದರಿ: ಕೆ.ರಾಘವೇಂದ್ರ ಹಿಟ್ನಾಳ



**ಕೊಪ್ಪಳ :** ಮಾನವತಾವಾದಿ ಮೌಲ್ಯಗಳ ಮೂಲಕ ತನ್ನನ್ನು ತಾನು ಪರಿವರ್ತನೆ ಮಾಡಿ ಸಮಾಜದ ಏಳಿಗೆಗಾಗಿ ಶ್ರಮಿಸಿದ ವೇಮನರ ತತ್ವಾದರ್ಶಗಳು ನಮ್ಮೆಲ್ಲರಿಗೂ ಮಾದರಿಯಾಗಿವೆ ಎಂದು ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಭಾನುವಾರ ನಗರದ ಕಿನ್ನಾಳ ರಸ್ತೆಯ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಲ್ಲಿ ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ ಮಹಾಯೋಗಿ ವೇಮನ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಾಯೋಗಿ ವೇಮನರು 15 ಮತ್ತು 16ನೇ ಶತಮಾನದಲ್ಲಿ ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದಿ ಮಾನವತಾವಾದಿ ಮೌಲ್ಯಗಳ ಮೂಲಕ ತನ್ನನ್ನು ತಾನು ಪರಿವರ್ತನೆ ಮಾಡಿ ಸಮಾಜದ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ. ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ ಅವರ ತತ್ವಗಳು ಮತ್ತು ಚರಿತ್ರೆ ಪಾಲನೆ ಮಾಡಿಕೊಂಡು ಅಂದಿನ ಕಾಲದ ಸ್ಥಿತಿಗತಿಗಳಿಂದ ವೇಮನರು ಮಹಾಯೋಗಿಗಳಾದರು. ಮಾನವ ಕುಲದ ಏಳಿಗಾಗಿ ಶ್ರಮಿಸಿದವರು ಮಹಾಯೋಗಿ ವೇಮನವರು. ಇಂತಹ ಮಹನೀಯರ ತತ್ವ ಆದರ್ಶಗಳನ್ನು ತಿಳಿದುಕೊಳ್ಳುವುದಷ್ಟೆ ಅಲ್ಲದೇ, ಅವುಗಳನ್ನು ಪಾಲನೆ ಮಾಡುವುದು ಸಹ ಎಲ್ಲರ ಜವಾಬ್ದಾರಿಯಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ ಅವರು ಮಾತನಾಡಿ ಮಹಾಯೋಗಿ ವೇಮನವರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ಅವರು ತಿಳಿಸಿರುವ ಮಾರ್ಗದರ್ಶನದಲ್ಲಿ ನೆಡದಾಗ ಮಾತ್ರ ಬದಕು ಸುಂದರವಾಗವುದರ ಜೊತೆಗೆ ಒಳ್ಳೆಯ ಸಮಾಜ ನಿರ್ಮಾಣವಾಗುವುದು ಎಂದು ತಿಳಿಸಿದರು.

ಗಂಗಾವತಿ ಹಿರಿಯ ಸಾಹಿತಿ ಲಿಂಗಾರೆಡ್ಡಿ ಅವರು ಮಹಾಯೋಗಿ ವೇಮನರ ಕುರಿತು ವಿಶೇಷ ಉಪನ್ಯಾಸ ನೀಡಿ, ಕಾಲ ಕಾಲಕ್ಕೆ ಶರಣರು, ಶರಣ ಪರಂಪರೆ, ದಾಸರು, ದಾಸ ಪರಂಪರೆ ಹೀಗೆ ಹಲವಾರು ಮಹನೀಯರು ತಮ್ಮ ತತ್ವಾದರ್ಶಗಳು, ವೈಜ್ಞಾನಿಕ ಚಿಂತನೆಗಳ ಮೂಲಕ ಸಮಾಜ ಸುಧಾರಣೆಗಾಗಿ ಶ್ರಮಿಸುವುದರ ಜೊತೆಗೆ ಮಾನವ ಜೀವನ ವಾಸ್ತವ್ಯಗಳನ್ನು ತಿಳಿಸಿದ್ದಾರೆ. ಅಂತಹ ಮಹನೀಯರಲ್ಲಿ ವೇಮನರು ಒಬ್ಬರು. ಮಹಾಯೋಗಿ ವೇಮನವರು ದಕ್ಷಿಣ ಭಾರತದ ಮಧ್ಯಕಾಲೀನ ಭಾರತದಲ್ಲಿ ಸಮಾಜದಲ್ಲಿನ ಸ್ಥಿತಿಗತಿಗಳನ್ನು ಅರಿತುಕೊಂಡು ಸಮಾಜದ ಒಳಿತಿಗಾಗಿ ಮಹಾನ್ ಶರಣರಾಗಿ, ಸಂತರಾಗಿ ಹಾಗೂ ದಾಸರಾಗಿ ವೈಚಾರಿಕತೆಯ ವಿಚಾರಗಳನ್ನು ಜನ ಸಾಮಾನ್ಯರಿಗೆ ತಿಳಿಸುವ ಮೂಲಕ ಮಹಾಯೋಗಿಗಳಾಗಿದ್ದಾರೆ ಎಂದರು.

ವೇಮನರು ಕಟ್ಟಿಕೊಟ್ಟಂತಹ ಪದ್ಯಗಳು ಸರ್ವಕಾಲಿಕ ಜೀವನದ ಸತ್ಯಾಂಶಗಳು ಹಾಗೂ ವಾಸ್ತವ್ಯಗಳನ್ನು ಒಳಗೊಂಡಿವೆ. ಅವರ ಪದ್ಯಗಳು ಮಾನವನ ಜೀವನದ ಸಾರಂಶಗಳನ್ನು ತಿಳಿಸುವುದರರೊಂದಿಗೆ ಜೀವನದ ನಿಜಸಂಗತಿಗಳನ್ನು ತಿಳಿಸಿವೆ. ದಾರ್ಶನಿಕರು ಜಗತ್ತಿಗೆ ಸಿದ್ಧಾಂತಗಳನ್ನು ಬಿಟ್ಟು ಹೋಗಿದ್ದು, ಅವುಗಳ ಮೇಲೆ ನಾವೆಲ್ಲರೂ ನಡೆಯಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕೊಪ್ಪಳ ತಹಶಿಲ್ದಾರ ವಿಠ್ಠಲ ಚೌಗಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ರೆಡ್ಡಿ ಸಮಾಜದ ಜಿಲ್ಲಾಧ್ಯಕ್ಷರಾದ ಜಗದೀಶ್ ಸಿಂಗನಾಳ್, ಸಮಾಜದ ಮುಖಂಡರಾದ ಪ್ರಭು ಹೆಬ್ಬಾಳ, ಎಸ್. ಬಿ ನಾಗರಹಳ್ಳಿ, ಹೇಮರೆಡ್ಡಿ ಬಿಸರಳ್ಳಿ , ಎಚ್.ಎಲ್ ಹೀರೆ ಗೌಡ್ರ ಹಾಗೂ ಮತ್ತಿತರರು ಸೇರಿದಂತೆ ಸಮಾಜದ ಹಿರಿಯರು ಉಪಸ್ಥಿತರಿದ್ದರು. ಶಕುಂತಲಾ ಬೆನ್ನಾಳ ಹಾಗೂ ತಂಡದವರು ನಾಡಗೀತೆ, ಸುಗಮ ಸಂಗೀತ ಪ್ರಸ್ತುತ ಪಡಿಸಿದರು. ಡಾ.ಬಿ.ಎನ್ ಹೊರಪೇಟೆ ಕಾರ್ಯಕ್ರಮವನ್ನು ನಿರೂಪಿಸಿದರು.

## ಕನ್ನಡ ಕಾಯಕದಲ್ಲಿ ಶ್ರಮಿಸುತ್ತಿರುವ ಮಠಗಳು: ಡಾ.ಬಸವಲಿಂಗ ಪಟ್ಟದೇವರು

**ಅಥಣಿ :** ನಮ್ಮ ಮಾತೃಭಾಷೆ ಕನ್ನಡವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಠಮಾನ್ಯಗಳು ಮಾಡುತ್ತಿರುವ ಕಾಯಕ ದೊಡ್ಡದು. ಶರಣ ಸಂಸ್ಕೃತಿ ಉತ್ಸವಗಳ ಮೂಲಕ ಗಡಿನಾಡಿನಲ್ಲಿ ಕನ್ನಡ ಕಟ್ಟುತ್ತಿರುವ ಮೋಟಗಿ ಮಠದ ಶ್ರೀಗಳ ಕಾರ್ಯ ಶ್ಲಾಘನೀಯವಾಗಿದೆ ಎಂದು ಭಾಲ್ಕಿ ಹಿರೇಮಠ ಸಂಸ್ಥಾನ ಮಠದ ನಾಡೋಜ ಡಾ. ಬಸವಲಿಂಗ ಪಟ್ಟದೇವರು ನುಡಿದರು.



ಅವರು ಇಲ್ಲಿನ ಮೋಟಗಿ ಮಠದ ಚನ್ನಬಸವ ಶಿವಯೋಗಿಗಳ ಲಿಂಗೈಕ್ಯ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಗಡಿನಾಡು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಮ್ಮೇಳನದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನಮ್ಮ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಾಡಿನ ಭಾಷೆ ಸಂಸ್ಕೃತಿ, ಧಾರ್ಮಿಕ ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮತ್ತು ಸ್ವಾಸ್ಥ್ಯ ಸಮಾಜವನ್ನು ರೂಪಿಸುವಲ್ಲಿ ಮಠಮಾನ್ಯಗಳು ಹಮ್ಮಿಕೊಳ್ಳುವ ಧಾರ್ಮಿಕ ಕಾರ್ಯಕ್ರಮಗಳು ಸಹಕಾರಿಯಾಗಿದೆ. ರಾಜ್ಯ ಸರ್ಕಾರ ಮಕ್ಕಳಿಗೆ ನೀಡುವ ಶಿಕ್ಷಣದ ಜೊತೆಗೆ ನಿತ್ಯ ವಚನ ಸಾಹಿತ್ಯವನ್ನು ಕಲಿಸಿಕೊಡುವುದರಿಂದ ಮಾನಸಿಕ ದೈಹಿಕ ಸದೃಢತೆ, ಮತ್ತು ಮಾನವೀಯ ಮೌಲ್ಯಗಳನ್ನು ರೂಡಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಸಾಣೆಹಳ್ಳಿ ಬ್ರಹನ್ಮಠದ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಪ್ರಸ್ತುತ ದಿನಗಳಲ್ಲಿ ಕೃಷಿ, ಆರೋಗ್ಯ, ಶಿಕ್ಷಣ, ರಾಜಕೀಯಕ್ಷೇತ್ರಗಳಲ್ಲಿಸುಧಾರಣೆಯಾದರೆ ಮಾತ್ರ ನಾಡಿನ ಕಲ್ಯಾಣವಾಗಲು ಸಾಧ್ಯ. 12ನೇ ಶತಮಾನದಲ್ಲಿ ಬಸವಾದಿ ಶರಣರು ನೀಡಿದ ವಚನ ಸಾಹಿತ್ಯ ಮತ್ತು ಅನುಭವ ಮಂಟಪ ನಮ್ಮ ದೇಶದ ಸಂವಿಧಾನ ರಚನೆಗೆ ಪ್ರೇರಣೆಯಾಗಿದೆ. ನಮ್ಮ ಕನ್ನಡ ಭಾಷೆ ಕೇವಲ ಭಾರತದಲ್ಲಿ ಅಷ್ಟೇ ಅಲ್ಲದೆ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಪಸರಿಸುವ ಮೂಲಕ ಶ್ರೀಮಂತಿಕೆಯ ಭಾಷೆಯಾಗಿದೆ. ಕನ್ನಡಿಗರು ಸ್ವಾಭಿಮಾನದಿಂದನಮ್ಮಭಾಷೆಯನ್ನಉಳಿಸಿ ಬೆಳೆಸಿ ಎಂದು ಹೋರಾಡುವ ಬದಲು ನಿದ್ದೆ ಮನೆ ಮನಗಳಲ್ಲಿ ಬಳಸುವಂತಾಗಬೇಕು. ಗಡಿನಾಡಿನ ಕನ್ನಡದ ಗುಡಿಯಾಗಿ ಮೋಟಗಿ ಮಠದ ಶ್ರೀಗಳು ಕನ್ನಡದ ಉಳಿವಿಗಾಗಿ ಶ್ರಮಿಸುತ್ತಿದ್ದಾರೆ. ಅನೇಕ ವಚನ ಸಾಹಿತ್ಯ ಮತ್ತು ಮಹಾತ್ಮರ ಚರಿತಾಮೃತ ಮಹಾ ಗ್ರಂಥವನ್ನು ರಚನೆ ಮಾಡುವ ಮೂಲಕ ಕನ್ನಡ ಸಾಹಿತ್ಯ ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಸಾಮರಸ್ಯದ ಸಮಾಜೋತ್ಸವ ಕಾರ್ಯಕ್ರಮ ನಡೆಸುವ ಮೂಲಕ ನಾಡಿನಲ್ಲಿ ಭಾವೈಕ್ಯತೆಯ ಸಂದೇಶ ಸಾರುತ್ತಿರುವ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಧಾರವಾಡ ಮುರುಘಾ ಮಠದ ಡಾ. ಮಲ್ಲಿಕಾರ್ಜುನ ಸ್ವಾಮೀಜಿ, ಮಾಜಿ ಸಚಿವೆ ಲೀಲಾದೇವಿ ಆರ್ ಪ್ರಸಾದ, ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಮಾತನಾಡಿದರು.

ಸಾಹಿತಿಗಳಾದ ಡಾ.ಬೈಲಮಂಗಲ ರಾಮೇಗೌಡ, ಡಾ. ವಿ ಎಸ್ ಮಾಳಿ, ಶಿವಾನಂದ ತವಳಿ , ಡಾ. ಕಲ್ಯಾಣರಾವ ಪಾಟೀಲ ಮಾತನಾಡಿ ಕನ್ನಡ ಭಾಷೆಯನ್ನು, ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಠಮಾನ್ಯಗಳು ಮತ್ತು ಸ್ವಾಮೀಜಿಗಳು ಮಾಡುತ್ತಿರುವ ಕಾಯಕದ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ ಅಥಣೀಶ ವಚನೋದ್ಯಾನ ಗ್ರಂಥ ಬಿಡುಗಡೆಗೊಳಿಸಲಾಯಿತು. ಧಾರವಾಡದ ಸಾಹಿತಿ ಡಾ. ಶಿವಾನಂದ ತವಳಿ ಅವರಿಗೆ ಅಥಣೀಶ ಅಂಕಿತ ಪುಸ್ತಕ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.

ಈಸಂದರ್ಭದಲ್ಲಿಪ್ರಕಾಶ್‌ಕಂಬತ್ತಳ್ಳಿ,ಶಂಕರ್ ಹಲಗತ್ತಿ, ಕೆ ಎಲ್ ರಾಜಶೇಖರ, ಸ್ವಾನ್ ಕೃಷ್ಣಮೂರ್ತಿ ಅವರಿಗೆ ಸಮಾಜ ಸೇವಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಗಚ್ಚಿನಮಠದ ಶಿವಬಸವ ಸ್ವಾಮೀಜಿ, ಶೆಟ್ಟರ ಮಠದ ಮರುಳುಸಿದ್ದ ಸ್ವಾಮೀಜಿ, ಡಾ. ಅಲ್ಲಮಪ್ರಭು ಸ್ವಾಮೀಜಿ, ಮಹಾಂತ ಸ್ವಾಮೀಜಿ, ವಿಮೋಚನ ಸಂಸ್ಥೆಯ ಅಧ್ಯಕ್ಷ, ಹಿರಿಯ ನ್ಯಾಯವಾದಿ ಬಿ ಎಲ್ ಪಾಟೀಲ. ನ್ಯಾಯವಾದಿ ಕಲ್ಲಪ್ಪ ವನಜೋಳ. ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ವಿವೇಕಾನಂದರ ತತ್ವಾದರ್ಶಗಳು ಇಂದಿನ ಯುವ ಪೀಳಿಗೆಗೆ ಸ್ಪೂರ್ತಿ: ಆತ್ಮಾರಾಮ ಮಹಾರಾಜ



**ಅಥಣಿ:**ಸ್ವಾಮಿ ವಿವೇಕಾನಂದರ ಆದರ್ಶಗಳು ಇಂದಿನ ಯುವ ಪೀಳಿಗೆಗೆ ದಾರಿ ದೀಪವಾಗಿವೆ. ನಾವುಗಳು ಅವರ ತತ್ವಾದರ್ಶಗಳನ್ನು ಪಾಲಿಸಿ ಅವರಂತೆ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದು ಕಕಮರಿಯ ಗುರುದೇವ ಆಶ್ರಮದ ಆತ್ಮಾರಾಮ ಮಹಾರಾಜರು ಹೇಳಿದರು.

ಅವರು ವಿವೇಕಾನಂದ ವಿದ್ಯಾ ವಿಕಾಸ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಸ್ವಾಮಿ ವಿವೇಕಾನಂದರ 162ನೇ ಜಯಂತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ಸ್ವಾಮಿ ವಿವೇಕಾನಂದರು ಒಬ್ಬ ಸನ್ಯಾಸಿಯಾಗಿ ಪೂಜೆ ಜಪ ತಪಗಳಿಗೆ ಸೀಮಿತವಾಗದೆ ಅನೇಕ ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನ ತೊಡಗಿಸಿಕೊಂಡಿದ್ದರು. ಅವರು ಏಳಿ.. ಎದ್ದೇಳಿ.! ಗುರಿ ಮುಟ್ಟುವವರಿಗೆ ನಿಲ್ಲದಿರಿ ಎಂಬ ಸಂದೇಶ ನಮ್ಮ ಯುವ ಜನಾಂಗವನ್ನು ಎಚ್ಚರಿಸುತ್ತದೆ. ಯುವ ಜನತೆಗೆ ಏನನ್ನಾದರೂ ಸಾಧಿಸಬೇಕೆನ್ನುವ ಛಲ ತುಂಬುವ ಅನೇಕ ಸಂದೇಶಗಳನ್ನು ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಯುವ ಪೀಳಿಗೆ ಸ್ವಾಮಿ ವಿವೇಕಾನಂದರ ತತ್ವ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರಂತೆ ಮಹತ್ತರ ಸಾಧನೆ ಮಾಡಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ರಾಮದುರ್ಗ ಬೆಳ್ಳೆರಿಮಠದ ಶಿವಾನಂದ ಸ್ವಾಮೀಜಿ ಮಾತನಾಡಿ ಪ್ರಪಂಚದಲ್ಲಿ ಯುವ ಶಕ್ತಿ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟಿದ್ದಾರೆ. ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಅವರ ಜಯಂತಿ ಕಾರ್ಯಕ್ರಮಗಳನ್ನು ಕೇವಲ ಭಾವಚಿತ್ರ ಪೂಜೆ ಮಾಡಿ ನಮನ ಸಲ್ಲಿಸಿದರೆ ಸಾಲದು, ಅವರ ನೀಡಿರುವ ದಿವ್ಯ ಸಂದೇಶಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಮತ್ತು ಯುವ ಜನಾಂಗಕ್ಕೆ ಮುಟ್ಟಿಸುವ ಕಾರ್ಯ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ವಿವೇಕಾನಂದ ವಿದ್ಯಾ ವಿಕಾಸ ಸಂಸ್ಥೆ ವಿವೇಕಾನಂದರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಿ ಡಿ ಮೇಕನಮರಡಿ ಮಾತನಾಡಿ ಪ್ರತಿಯೊಬ್ಬರು ಜಾತಿ, ಮತ ಪಂಥಗಳನ್ನು ಮರೆತು ಸ್ವಾಮಿ ವಿವೇಕಾನಂದರ ಜೀವನ ಆದರ್ಶಗಳನ್ನು ಪಾಲಿಸಿದಾಗ ಜಾತ್ಯಾತೀತ ಮತ್ತು ಸದೃಢ ಭಾರತವನ್ನು ಕಟ್ಟಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಸಹಕಾರಿ ಧುರೀಣ ಹಾಗೂ ದಾನ ವೀರ ಮಹಾವೀರ ಪಡನಾಡ, ಸಮಾಜ ಸೇವಕ ಅಪ್ಪಾಸಾಬ ತೇರದಾಳ, ಡಿ ಎಲ್ ಮೇಕನಮರಡಿ, ಸಂಸ್ಥೆಯ ಕಾರ್ಯದರ್ಶಿ ಲಲಿತಾ ಡಿ ಮೆಕನಮರಡಿ, ಮುಖ್ಯೋಪಾಧ್ಯಾಯ ಪ್ರಶಾಂತ ಮುನ್ನೊಳ್ಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳ ಸಾಧನೆಗೆ ಪ್ರೇರಣೆ: ಡಾ. ಲೋಕಾಪುರ

**ಅಥಣಿ :** ವಿದ್ಯಾರ್ಥಿ ಜೀವನದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ ಪ್ರಮುಖ ಘಟ್ಟವಾಗಿದೆ. ವಿದ್ಯಾರ್ಥಿಗಳು ಓದುವ ಆಸಕ್ತಿ ಬೆಳೆಸಿಕೊಂಡು ಉತ್ತಮ ಅಂಕ ಪಡೆದು ಶಾಲೆಯ ಫಲಿತಾಂಶ ಹೆಚ್ಚಿಸಬೇಕು ಕಳೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಈ ವರ್ಷದ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ ಎಂದು ಹಿರಿಯ ಸಾಹಿತಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಬಾಳಾಸಾಹೇಬ ಲೋಕಾಪುರ ಹೇಳಿದರು



ಅವರು ಇಲ್ಲಿನ ವಿವೇಕಾನಂದ ವಿದ್ಯಾ ವಿಕಾಸ ಸಂಸ್ಥೆಯಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಕೇವಲ ಹೆಚ್ಚು ಅಂಕ ಗಳಿಸುವ ಶಿಕ್ಷಣ ನೀಡಿದರೆ ಸಾಲದು, ಗುಣಮಟ್ಟದ ಶಿಕ್ಷಣದ ಜೊತೆಗೆ ತಂದೆ ತಾಯಿ ಹಾಗೂ ಗುರು ಹಿರಿಯರನ್ನ ಗೌರವಿಸುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು, ದೇಶಭಕ್ತಿಯನ್ನು ಕಲಿಸಿಕೊಡುವುದು ಇಂದಿನ ಅಗತ್ಯವಾಗಿದೆ ಎಂದು ಹೇಳಿದರು

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಥಣಿ ಪುರಸಭೆಯ ಉಪಾಧ್ಯಕ್ಷೆ ಭುವನೇಶ್ವರಿ ಬೀರಪ್ಪ ಯಕ್ಕಂಚಿ ಮಾತನಾಡಿ ಪ್ರತಿಯೊಬ್ಬರ ಬದುಕಿನಲ್ಲಿ ಶಿಕ್ಷಣ ಎಂಬುದು ಬಹಳ ಮಹತ್ವದ ಹೆಜ್ಜೆಯಾಗಿದೆ. ಯಾರೂ ಕದಿಯದ ಸಂಪತ್ತು ಜ್ಞಾನ. ಗುರುಗಳ ಮಾರ್ಗದರ್ಶನದಲ್ಲಿ ವಿದ್ಯೆ ಎಂಬ ಸಂಪತ್ತನ್ನು ಪಡೆದುಕೊಂಡು ನಮ್ಮ ಬದುಕನ್ನ ಸುಂದರ ಮಾಡಿಕೊಳ್ಳಬೇಕು. ಹಿಂದಿನ ಕಾಲದ ಶಿಕ್ಷಣಕ್ಕೂ ಇಂದಿನ ದಿನಗಳು ಶಿಕ್ಷಣಕ್ಕೂ ಬಹಳಷ್ಟು ವ್ಯತ್ಯಾಸವಿದೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಂಡು ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಶಿಕ್ಷಣ ನೀಡಲಾಗುತ್ತಿದೆ. ಆದರೆ ಇಂದಿನ ಮಕ್ಕಳು ಮಾನವೀಯ ಮೌಲ್ಯಗಳನ್ನು, ಹಿಂದಿನ ಸಂಪ್ರದಾಯ ಮತ್ತು ಸಂಸ್ಕಾರಗಳನ್ನ ಮರೆಯುತ್ತಿದ್ದಾರೆ. ಮನೆಯಲ್ಲಿ ಪಾಲಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರದ ಶಿಬಿರಗಳನ್ನು ಕೂಡ ನಡೆಸುವುದು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಡಿ ಡಿ ಮೇಕನಮರಡಿ ಮಾತನಾಡಿ ನಮ್ಮ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಕಳೆದ ವರ್ಷದಲ್ಲಿ ಕು. ಗೌರಿ ಸೂರ್ಯವಂಶಿ ರಾಜ್ಯಮಟ್ಟಕ್ಕೆ ದ್ವಿತೀಯ ಸ್ಥಾನ ಪಡೆದಿರುವುದು ನಮ್ಮೆಲ್ಲರಿಗೆ ಹೆಮ್ಮೆ. ಈ ಬಾರಿ ನಮ್ಮ ಶಾಲೆಯ ಫಲಿತಾಂಶ ಶೇ.100 ರಷ್ಟು ಆಗಿದೆ. ಸಾಧಕ ವಿದ್ಯಾರ್ಥಿಗಳನ್ನು ಸಂಸ್ಥೆಯಿಂದ ಪ್ರತಿಭಾ ಪುರಸ್ಕಾರ, ನಗದು ಬಹುಮಾನ ನೀಡಿ ಗೌರವಿಸುವ ಮೂಲಕ ಮುಂಬರುವ ವಿದ್ಯಾರ್ಥಿಗಳಿಗೂ ಸ್ಪೂರ್ತಿ ತುಂಬುವದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದ ಅವರು ವಿದ್ಯಾರ್ಥಿಗಳು ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ 2023- 24ನೇ ಸಾಲಿನ ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯ ರಾಂಕ್ ವಿಜೇತರಾದ ಕು.ಸ್ವಾತಿ ಹಿರೇಮಠ, ಕು.ತನುಶ್ರೀ ನಿಡೋಣಿ. ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಈ ಸಮಾರಂಭದಲ್ಲಿ ಪ್ರಗತಿಪರ ರೈತ ಶಿವರಾಯ ಗುಮಟಿ, ಸಮಾಜ ಸೇವಕ ಸುರೇಶ ನಂದಿಗೌಡರ, ಮುಖ್ಯೋಪಾಧ್ಯಾಯ ಪ್ರಶಾಂತ್ ಮುನ್ನೊಳ್ಳಿ, ವೈ. ಎ. ಜಮಾದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಆನ್ ಲೈನ್ ಔಷಧಿ ಮಾರಾಟ ತಡೆಗೆ ವಿಜಯಕುಮಾರ ಬುರ್ಲಿ ಆಗ್ರಹ

**ಅಥಣಿ :** ಔಷಧ ವ್ಯಾಪಾರದಲ್ಲಿ ಸಾಕಷ್ಟು ಬಂಡವಾಳ ತೊಡಗಿಸಿ ಅನೇಕ ವರ್ಷಗಳಿಂದ ಗ್ರಾಹಕರಿಗೆ ಅಗತ್ಯವಾದ ಔಷಧಗಳನ್ನು ಮಾರುತ್ತಿದ್ದ ನಮಗೆ ಈ ಆನ್ ಲೈನ್ ಔಷಧ ಮಾರಾಟದಿಂದ ಸಾಕಷ್ಟು ನಷ್ಟವಾಗುತ್ತಿದೆ. ಆನ್ ಲೈನ್ ಔಷಧ ಮಾರಾಟ ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮ ಕೈಗೊಂಡು ನಮ್ಮ ರಕ್ಷಣೆಗೆ ಧಾವಿಸಬೇಕು ಎಂದು ಬೆಳಗಾವಿ ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿಜಯಕುಮಾರ ಬುರ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಅವರು ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಕೋವಿಡ್ ವೇಳೆಯಲ್ಲಿ ನೀಡಿದ್ದ ವಿಶೇಷ ಅನುಮತಿಯನ್ನು ಆನ್ ಲೈನ್ ಔಷಧಿ ಮಾರಾಟ ವೇದಿಕೆಗಳು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಆನ್ ಲೈನ್ ವೇದಿಕೆಗಳು ಔಷಧ ಮಾರಾಟಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಯಮಗಳನ್ನು ಉಲ್ಲಂಘಿಸುತ್ತಿವೆ. ಯಾವುದೇ ಸುರಕ್ಷತಾ ಕ್ರಮಗಳನ್ನು ಅನುಸರಿಸದೆ ಔಷಧಗಳನ್ನು ಮನೆ ಬಾಗಿಲಿಗೆ ಪೂರೈಸುತ್ತಿವೆ. ಇದು ರೋಗಿಗಳು ಹಾಗೂ ಸಾರ್ವಜನಿಕರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಆಪಾದಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ ಮಾತನಾಡಿ ಆನ್ ಲೈನ್ ಮೂಲಕ ಔಷಧ ಮಾರಾಟವನ್ನು ಕೂಡಲೇ ತಡೆಯಬೇಕು. ಆನ್‌ಲೈನ್ ಔಷಧ ಮಾರಾಟಕ್ಕೆ ನೀಡಿದ್ದ ಪರವಾನಗಿಯನ್ನು ವಾಪಸ್ ಪಡೆಯಬೇಕು.

ಇಲ್ಲವಾದಲ್ಲಿ ಆಲ್ ಇಂಡಿಯಾ ಆರ್ಗನೈಝೇಷನ್ ಆಫ್ ಕೆಮಿಸ್ಟ್ ಆ?ಯಂಡ್ ಡ್ರಗ್ಗಿಸ್ಟ್ ಹಾಗೂ ಕರ್ನಾಟಕ ಸ್ಟೇಟ್ ಕೆಮಿಸ್ಟ್ ಆಯಿಂಡ್ ಡ್ರಗ್ಗಿಸ್ಟ್ ಅಸೋಸಿಯೇಷನ್ ಸದಸ್ಯರು ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ.

# ಮಹಾಪುರುಷರ ಆದರ್ಶಗಳನ್ನು ಪಾಲಿಸಿ

**ರಬಕವಿ-ಬನಹಟ್ಟಿ :** ವೇಮನರು ರಚಿಸಿದ ವಚನಗಳು ಸರ್ವ ಕಾಲಕ್ಕೂ ಪ್ರಸ್ತುತವಾಗಿದ್ದು ಅವುಗಳನ್ನು ಅರಿತುಕೊಂಡು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಭಾನುವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಆಚರಿಸಿದ ವೇಮನರ ಜಯಂತ್ಯೋತ್ಸವದ ಸಂದರ್ಭದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಯೋಗಿಗಳು, ಋಷಿ ಮುನಿಗಳು, ಮಹಾಪುರುಷರು, ಸಾಧು ಸಂತರು ನಮ್ಮ ದೇಶದ ಮಹಾನ್ ಆಸ್ತಿಗಳು. ಈ ವ್ಯಕ್ತಿಗಳು ಒಂದೇ ಜಾತಿ ಸಮುದಾಯಕ್ಕೆ ಸಿಮೀತರಾಗಿಲ್ಲ. ಇವರ ತತ್ವ ಸಿದ್ಧಾಂತಗಳು ಸರ್ವಕಾಲಕ್ಕೂ ಪ್ರಸ್ತುತವಾಗಿವೆ ಎಂದು ಶಾಸಕ ಸವದಿ ತಿಳಿಸಿದರು.

ಕನ್ನಡ ಉಪನ್ಯಾಸಕ ಅದೃಶ್ಯ ಕಾಡದೇವರ ಮಾತನಾಡಿ, ವೇಮನರು ಕೂಡಾ ಚೌಪದಿಗಳನ್ನು ರಚನೆ ಮಾಡಿ ಅವುಗಳ ಮೂಲಕ ಜನರಿಗೆ ಹಲವಾರು ಸಂದೇಶಗಳನ್ನು ನೀಡಿದರು. ಕನ್ನಡದ ಸರ್ವಜ್ಞರಂತೆ ವೇಮನ ಕೂಡಾ ಒಬ್ಬ ಆದರ್ಶ ವಚನಕಾರರಾಗಿದ್ದರು. ವೇಮನರರನ್ನು ರೂಪಿಸುವಲ್ಲಿ ಹೇಮರೆಡ್ಡಿ ಮಲ್ಲಮ್ಮನವರ ಪಾತ್ರ ಬಹಳಷ್ಟು ದೊಡ್ಡದು ಎಂದರು.

ರೆಡ್ಡಿ ಸಮಾಜದ ಮುಖಂಡರಾದ ಸಿದ್ದಪ್ಪ ಮೇಣಿ, ರಾಮಣ್ಣ ಲೆಂಡಿ, ರಾಜು ಲೆಂಡಿ, ಸಚಿನ ನಿಂಗಸಾನಿ, ಕೋರಡ್ಡಿ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ರವಿ ಈಟಿ. ಚೇತನ ಭಜಂತ್ರಿ, ಎಂ. ಕೆ. ಮುಲ್ಲಾ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ವಿಜ್ಞಾನ ಸ್ಪರ್ಧೆ: ನೆಹರು ಶಾಲೆ ರಾಷ್ಟ್ರ ಮಟ್ಟದಲ್ಲಿ ದ್ವಿತೀಯ ಸ್ಥಾನ



**ಗುಳೇದಗುಡ್ಡ :** ಪಟ್ಟಣದ ನೆಹರು ಇಂಟನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನದ ವಸ್ತು ಪ್ರದರ್ಶನ ಮತ್ತು ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಚಿನ್ನದ ಪದಕ ಪಡೆದಿದ್ದಾರೆ.

ಮಧ್ಯ ಪ್ರದೇಶದ ಬುರಹಾನಪುರದಲ್ಲಿ ನ್ಯಾಷನಲ್ ಕೌನ್ಸಿಲ್ ಆಫ್ ಟೀಚರ್ ಸೈಂಟಿಸ್ಟ್ ಡಾ. ಎಪಿಜೆ ಅಬ್ದುಲ್ ಕಲಾಂ ನ್ಯಾಷನಲ್ ಕೌನ್ಸಿಲ್ ಆಫ್ ಟೀಚರ್ ಸೈಂಟಿಸ್ಟ್ ರಾಮನ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ ಮತ್ತು ಮ್ಯಾಕ್ರೋ ವಿಜನ್ ಅಕಾಡೆಮಿ ಬುರಾನ್‌ಪುರ್ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 5ನೇ ಭಾರತೀಯ ಸೈನ್ಸ್ ಮತ್ತು ಟೆಕ್ನೋ ಫೆಸ್ಟಿವಲ್ 2025 ರಾಷ್ಟ್ರ ಮಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನ ಮಾದರಿ ವಸ್ತು ಪ್ರದರ್ಶನ ಮತ್ತು ಸ್ಪರ್ಧೆದಲ್ಲಿ ಭಾಗವಹಿಸಿದ ನೆಹರು ಶಾಲೆಯ ವಿದ್ಯಾರ್ಥಿಗಳಾದ ಪ್ರಣವ್ ನರೇಗಲ್ ಮತ್ತು ಸಮೀರ್ ಹಾದಿಮನಿ ದ್ವಿತೀಯ ಸ್ಥಾನ ಹಾಗೂ ಬಂಗಾರದ ಪದಕ, ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಖ್ಯಾತ ವಿಜ್ಞಾನಿಗಳಾದ ಡಾ. ಜೆ.ಜೆ ರಾವಲ್ ಡಾ. ಬಿ.ಕೆ.ತ್ಯಾಗಿ, ಡಾ.ಡಿ.ಕೆ. ದೇಶಪಾಂಡೆ, ಡಾ.ಪುಲಿಕೇಶಿ, ಏಷ್ಯಾ ಖಂಡದ ಪ್ರತಿಷ್ಠಿತ ಕಾಲೇಜ್ ಮೆಕ್ರೋ ವಿಜನ್ ಅಕಾಡೆಮಿಯ ಸಂಸ್ಥಾಪಕ ಆನಂದ್ ಪ್ರಕಾಶ್ ಚೌಕ್ಸೆ, ರಾಷ್ಟ್ರೀಯ ಕಾರ್ಯದರ್ಶಿ ಸಂದೀಪ ಪಾಟಿಲ್, ದಕ್ಷಿಣ ಭಾರತದ ನಿರ್ದೇಶಕ ಎಸ್.ವಿ.ಬುರಲಿ ಇನ್ನೂ ಅನೇಕ ಮಹನೀಯರು ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಿಸಿದರು.

ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ ಮುತ್ತುಸ್ವಾಮಿ ದೇವಾಂಗಮಠ ಹಾಗೂ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳಿಗೆ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಹೊಳಬಸು ಶೆಟ್ಟರ, ಶಾಲೆಯ ಅಧ್ಯಕ್ಷ ಮಹಾಂತಯ್ಯ ಸರಗಣಾಚಾರಿ, ಉಪಾಧ್ಯಕ್ಷ ವಿರೇಶ ಚಿಂದಿ, ಶಾಲೆಯ ಪ್ರಾಚಾರ್ಯ ಹೇಮಂತ್ ಟಗರಿ ಇತರರು ಅಭಿನಂದಿಸಿದ್ದಾರೆ.

# ಹುಲಿಗೆಮ್ಮ ದೇವಿ ಸೇವಾ ಸಂಘದ ಸಮಾಜ ಸೇವಾ ಕಾರ್ಯ ಶ್ಲಾಘನೀಯ




**ಬಾಗಲಕೋಟೆ :** ನಗರದ ವಿಶ್ವ ವಿನೂತನ ಚಿತ್ರಕಲಾ ಮಹಾವಿದ್ಯಾಲಯದಲ್ಲಿ ಶ್ರೀ ಹುಲಿಗೆಮ್ಮ ದೇವಿ (ಪ.ಜಾ.) ಸೇವಾ ಸಂಘ, ಬಾಗಲಕೋಟೆಯ ಮೂರನೆಯ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಬಾಗಲಕೋಟೆಯ ಖ್ಯಾತ ವೈದ್ಯ ಡಾ. ಭೀಮಸೇನ ಬಾಗಲಕೋಟ ಅವರು ಉದ್ಘಾಟಿಸಿ ಮಾತನಾಡಿ, ಹುಲಿಗೆಮ್ಮ ದೇವಿ ಸೇವಾ ಸಂಘವು ಗಣಕಯಂತ್ರ ತರಬೇತಿಯ ಜೊತೆಗೆ ಹಲವಾರು ಸಮಾಜ ಸೇವಾ ಕಾರ್ಯಗಳನ್ನು ಕೈಗೊಂಡು ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದು ಬಣ್ಣಿಸಿದರು. ಅಲ್ಲದೆ ಈ ಸಂಸ್ಥೆಯು ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿರುವ ಹಲವಾರು ವ್ಯಕ್ತಿಗಳನ್ನ ಗುರುತಿಸಿ ಅವರನ್ನು ಪುರಸ್ಕರಿಸುತ್ತಿರುವುದು ಅತ್ಯಂತ ಮೆಚ್ಚುಗೆಯ ಸಂಗತಿ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡ ಜಾನಪದ ಪರಿಷತ್ ಜಿಲ್ಲಾ ಅಧ್ಯಕ್ಷ ಡಿ. ಎಂ. ಸಾಹುಕಾರ ಮಾತನಾಡಿ, ಈ ಸಂಸ್ಥೆಯು ಜಾತ್ಯಾತೀತ, ಧರ್ಮಾತೀತವಾಗಿ ಸಮಾಜದಲ್ಲಿ ಎಲೆ ಮರಿಯ ಕಾಯಿಯಂತಿರುವ ಹಲವು ಕ್ಷೇತ್ರದ ಪ್ರತಿಭೆಗಳನ್ನು ಗುರುತಿಸಿ ಸತ್ಕರಿಸುತ್ತಿರುವುದು ಅತ್ಯಂತ ಹೆಮ್ಮೆ ಹಾಗೂ ಅಭಿಮಾನದ ಸಂಗತಿಯಾಗಿದೆ. ಅಲ್ಲದೆ ಸರ್ಕಾರದ ಯಾವುದೇ ಆರ್ಥಿಕ ಸಹಾಯವಿಲ್ಲದೆ ಒಂದು ಸಂಸ್ಥೆಯನ್ನು ಸಮಾಜಮುಖಿಯಾಗಿ ಮುನ್ನಡಿಸಿಕೊಂಡ ಹೋಗುವುದು ಸಾಕಷ್ಟು ಕಷ್ಟದ ಕೆಲಸ, ಅದನ್ನು ಈ ಸಂಸ್ಥೆಯ ಅಧ್ಯಕ್ಷ ನಿಂಗರಾಜ ಡಿ. ಮಬ್ರುಮಕರ ಅವರು ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಕಾರ ರಹಿತ ಶಿಕ್ಷಣ ಎಷ್ಟು ಪಡೆದರು ಪ್ರಯೋಜನವಿಲ್ಲ. ಮೌಲ್ಯಯುತ, ಸಂಸ್ಕಾರಯುತ ಶಿಕ್ಷಣ ಪಡೆಯುವುದು ಅವಶ್ಯಕವಾಗಿದೆ ಎಂದರು.

ಸಂಘದ ಸಂಸ್ಥಾಪಕ ಅಧ್ಯಕ್ಷ ನಿಂಗರಾಜ ಡಿ. ಮಬ್ರುಮಕರ ಪ್ರಸ್ತಾವಿಕವಾಗಿ ಮಾತನಾಡಿ, ಸಂಸ್ಥೆಯು ಬೆಳೆದು ಬಂದ ರೀತಿ, ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಹಾಗೂ ವರ್ಷದುದ್ದಕ್ಕೂ ಸಂಸ್ಥೆಯು ನಿರ್ವಹಿಸಿದ ವಿವಿಧ ಸಮಾಜಮುಖಿ ಕಾರ್ಯಗಳನ್ನು ಪರಿಚಯಿಸಿದರು.

ಕಾರ್ಯಕ್ರಮದಲ್ಲಿ ಸಮಾಜಸೇವೆ, ಶಿಕ್ಷಣ, ಸಾಹಿತ್ಯ, ಕ್ರೀಡೆ, ರಂಗಭೂಮಿ, ಚಿತ್ರಕಲೆ, ವಕೀಲ ವೃತ್ತಿ ಇತ್ಯಾದಿ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಮಹನೀಯರನ್ನು ಸತ್ಕರಿಸಲಾಯಿತು.

> ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣ, ಅಮೂಲ್ಯವಾದ ನೀರು ಹಿತಮಿತ ಬಳಕೆ, ಉತ್ತಮ ಪರಿಸರಕ್ಕಾಗಿ ಗಿಡನೆಟ್ಟು ಪೋಷಿಸುವುದು, ನಿರುದ್ಯೋಗ ನಿವಾರಣೆಗೆ ತರಬೇತಿ, ಕಾನೂನು ಪಾಲನೆ, ಆರೋಗ್ಯ ಯುತ ಸಮಾಜ ನಿರ್ಮಾಣಕ್ಕಾಗಿ ಜನರಲ್ಲಿ ಸಂಘ ಸಂಸ್ಥೆಗಳು ಜಾಗೃತಿ ಮೂಡಿಸಬೇಕು.
>
> । ಡಿ ಎಂ ಸಾವಕಾರ
> ಜಿಲ್ಲಾ ಅಧ್ಯಕ್ಷರು,
> ಕನ್ನಡ ಜಾನಪದ ಪರಿಷತ್
> ಬಾಗಲಕೋಟೆ

ವಿಶ್ವ ವಿನೂತನ ಚಿತ್ರಕಲಾ ಮಹಾವಿದ್ಯಾಲಯದ ಪ್ರಾಚಾರ್ಯ ಶಿವಾನಂದ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಾಜ ಸೇವಕಿ ಶ್ರೀಮತಿ ರೇಣುಕಾ ಎಂ. ನ್ಯಾಮಗೌಡರ ವ್ಯಾಪಾರಸ್ಥರಾದ ಕೃಷ್ಣಾ ಪವಾರ, ಎಸ್. ಬಿ. ಯಾವಗಲ್ಲಮಠ, ಆರ್. ಜಿ. ಪಾಟೀಲ, ಐ. ಎಸ್. ಗೋಡಿ, ಆರ್. ಬಿ. ನಬಿವಾಲೆ, ವಿ. ಜಿ. ಪಾಟೀಲ, ಕೆ. ಎಂ. ಮಾಗುಂಡಪ್ಪನವರ, ವಿಜಯಕುಮಾರ ಕೋಲಾರ, ರೇಖಾ ಗೋಗಿ, ರತ್ನಾಬಾಯಿ ಮಬ್ರುಮಕರ, ಉಮೇಶ ಹಡಲಗೇರಿ, ಮತ್ತಿತರಿದ್ದರು.

# ಕೋಟೆಕಲ್ ಗ್ರಾಪಂಗೆ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ

## ಎಮ್ಮಿ ಅಧ್ಯಕ್ಷೆ, ಮೈಲಾರಿ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ




**ಗುಳೇದಗುಡ್ಡ :** ಗುಳೇದಗುಡ್ಡ ತಾಲೂಕಿನ ಕೋಟೆಕಲ್ ಗ್ರಾಮ ಪಂಚಾಯಿತಿಯ ಸಭಾ ಭವನದಲ್ಲಿ ಜರುಗಿದ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಸಮೀಪದ ತೋಗುಣಸಿ ಗ್ರಾಮದ ಮಹಾಲಿಂಗವ್ವ ಎಮ್ಮಿ ಅಧ್ಯಕ್ಷರಾಗಿ ಹಾಗೂ ಕೋಟೆಕಲ್ಲ ಗ್ರಾಮದ ಮೈಲಾರಲಿಂಗಪ್ಪ ಆಲೂರು ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾದರು.

ಒಟ್ಟು 12 ಜನ ಸದಸ್ಯ ಬಲ ಹೊಂದಿದ್ದ ಕೋಟೆಕಲ್ ಗ್ರಾಪಂದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹಾಲಿಂಗವ್ವ ಎಮ್ಮಿ, ಉಪಾಧ್ಯಕ್ಷ ಸ್ಥಾನಕ್ಕೆ ಮೈಲಾರಲಿಂಗಪ್ಪ ಆಲೂರ ಅವರು ತಲಾ ಒಬ್ಬೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ತಾಪಂ ಇಓ ಮಲ್ಲಿಕಾರ್ಜುನ ಬಡಿಗೇರ ಅವರು ಅಧ್ಯಕ್ಷರಾಗಿ ಮಹಾಲಿಂಗವ್ವ ಗದಿಗೆಪ್ಪ ಎಮ್ಮಿ, ಉಪಾಧ್ಯಕ್ಷರಾಗಿ ಮೈಲಾರಲಿಂಗಪ್ಪ ನಿಂಗಪ್ಪ ಆಲೂರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಕೋಟೆಕಲ್ಲ ಗ್ರಾಮ ಪಂಚಾಯತಿಯಲ್ಲಿ ಒಟ್ಟು 12 ಜನ ಸದಸ್ಯರಲ್ಲಿ 10 ಜನ ಸದಸ್ಯರು ಉಪಸ್ಥಿತರಿದ್ದು, ಇಬ್ಬರು ಸದಸ್ಯರು ಚುನಾವಣೆಯಲ್ಲಿ ಗೈರಾಗಿದ್ದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷೆ ಮಹಾಲಿಂಗವ್ವ ಎಮ್ಮಿ ಅವರನ್ನು ಪಿಡಿಓ ಆರತಿ ಕ್ಷತ್ರಿ, ಮತ್ತು ಉಪಾಧ್ಯಕ್ಷ ಮೈಲಾರ ಆಲೂರ ಅವರನ್ನು ತಾಪಂ ಅಧಿಕಾರಿ ಮಲ್ಲಿಕಾರ್ಜುನ್ ಬಡಿಗೇರ್ ಗ್ರಾಮ ಪಂಚಾಯತಿ ಪರವಾಗಿ ಸನ್ಮಾನಿಸಿ ಗೌರವಿಸಿದರು.

**ವಿಜಯೋತ್ಸವ:**

ನೂತನವಾಗಿ ಮಹಾಲಿಂಗವ್ವ ಎಮ್ಮಿ ಅಧ್ಯಕ್ಷರಾಗಿ, ಮೈಲಾರಲಿಂಗಪ್ಪ ಆಲೂರ ಅವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಸಿಹಿ ಹಂಚಿ ಸಂಭ್ರಮಿಸಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಶಶಿಧರ ದೇಸಾಯಿ ಅವರು ನೂತನವಾಗಿ ಆಯ್ಕೆಯಾದ ಅಧ್ಯಕ್ಷ, ಉಪಾಧ್ಯಕ್ಷರಿಗೆ ಗುಳೇದಗುಡ್ಡ ಖಣದಿಂದ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಸಂಗಪ್ಪ ಹಡಪದ, ಬಸವರಾಜ ಚಿಲ್ಲಾಪೂರ, ಶಿವಾನಂದ ವಾಲಿಕಾರ, ಮಾಗುಂಡಪ್ಪ ಸುಂಕದ, ಸದಸ್ಯರಾದ ಕಾಶಿನಾಥ ಪುರಾಣಿಕಮಠ, ಹನಮಂತ ಕಡ್ಲಿಮಟ್ಟಿ, ಹುಚ್ಚೇಶ ಪೂಜಾರ, ಶೋಭಾ ವಾಲಿಕಾರ, ಮಲ್ಲಕಾಜಪ್ಪ ಜಾಲಿಹಾಳ, ಶೃತಿ ಪತ್ತಾರ, ಎಎಂ.ಜಿ.ಭಗವತಿ, ಯಲಗುರದಪ್ಪ ತೊಗಲಂಗಿ, ವೈ.ಜಿ.ತಳವಾರ, ಕರಿಯಪ್ಪ ಸೀತಿಮನಿ, ಮೌನೇಶಪತ್ತಾರ, ಮಹದೇವಪ್ಪ ಕೋಟಿ, ಮಲ್ಲಪ್ಪ ತಳವಾರ, ಭೂಸರಾತ, ಹಾದಿಮನಿ, ಪಿಡಿಓ ಆರತಿ ಕ್ಷತ್ರಿ, ರಮೇಶ ಅಬಕಾರಿ, ಸಿದ್ದು ಅಬಕಾರಿ, ಬೇವಿನಮಟ್ಟಿ, ಸೇರಿದಂತೆ ಇತರರು ಇದ್ದರು.

# ವಿಜೃಂಭಣೆಯಿಂದ ಜರುಗಿದ ಸಾಂಸ್ಕೃತಿಕ ಮತ್ತು ವಸ್ತು ಪ್ರದರ್ಶನ ಕಾರ್ಯಕ್ರಮ




**ಬಾಗಲಕೋಟೆ :** ದಿನಾ0ಕ 18-01-2025 ರ0ದು ತೇಜಸ್ ಅ0ತರಾಷ್ಟ್ರೀಯ ವಸತಿ ಶಾಲೆ ನವನಗರ, ಬಾಗಲಕೋಟ ಶಾಲೆಯ ಆವರಣದಲ್ಲಿ ವಾರ್ಷಿಕೋತ್ಸವದ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು ಅದರಲ್ಲಿ ವಿಜ್ಞಾನ, ಸಮಾಜ ವಿಜ್ಞಾನ, ಗಣಿತ, ಚಿತ್ರಕಲೆ, ಇಂಗ್ಲೀಷ್, ಹಿಂದಿ, ಕನ್ನಡ ಬುದ್ದಿಮತ್ತೆಯುಳ್ಳ ಯಂತ್ರಗಳ ವಿನ್ಯಾಸಗಳ ಪ್ರದರ್ಶನ ಮಾಡಲಾಯಿತು. ಅತಿ ವಿಜ್ರ0ಭಣೆಯಿ0ದ ಕಾರ್ಯಕ್ರಮ ಜರುಗಿತು.

ಸಾಂಸ್ಕೃತಿಕ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಸ್ಥೆಗಳ ಪೋಷಕ ಮತ್ತು ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಡಾ ಮುರುಗೇಶ್ ಆರ್ ನಿರಾಣಿ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ತಮ್ಮ ಭಾಷಣದಲ್ಲಿ ಅವರು ಶಿಕ್ಷಣದ ಪ್ರಾಮುಖ್ಯತೆ ಮತ್ತು ಸಂಸ್ಥೆಗಳು ವಿಶ್ವದರ್ಜೆಯ ಶಿಕ್ಷಣವನ್ನು ಒದಗಿಸುವ ಮತ್ತು ಮುಂದಿನ 10 ವರ್ಷಗಳಲ್ಲಿ ವಿಶ್ವವಿದ್ಯಾನಿಲಂಯುಗಳಲ್ಲಿ ಹೆಸರಾಂತ ಮತ್ತು ಅತ್ಯುತ್ತಮವಾದುದೆಂದು ಖಚಿತಪಡಿಸಿಕೊಳ್ಳುವ ಉದ್ದೇಶವನ್ನು ಎತ್ತಿ ತೋರಿಸಿದರು.

ಪ್ರಶಸ್ತಿ ಪ್ರಧಾನ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಕೆ.ಎಮ್.ಜಾನಕಿ ಜಿಲ್ಲಾಧಿಕಾರಿಗಳು ಬಾಗಲಕೋಟ. ವಿದ್ಯಾರ್ಥಿ ಹಾಗೂ ಪಾಲಕರ ಕುರಿತು ಜೀವನವೆಂಬುದು ಒಂದು ಕಲಿಕೆ. ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ, ಮೌಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಬೆಳೆಸಬೇಕು. ದೇಶ ಮುಂದುವರೆಯುಬೇಕಾದರೆ ಶಿಕ್ಷಣದ ಅಗತ್ಯವಿದೆ ಎಂದು ಸಂದೇಶ ನೀಡಿದರು.

ಸಭೆಯ ಅಧ್ಯಕ್ಷ ಸ್ಥಾನವನ್ನು ಶ್ರೀ ಮಾಧುರಿ ಮುಧೋಳ ತೇಜಸ್ ಅ0ತರಾಷ್ಟ್ರೀಯ ವಸತಿ ಶಾಲೆಯ ಅಧ್ಯಕ್ಷರು ವಹಿಸಿಕೊ0ಡು ಮಾತನಾಡಿ ಯಾವುದೇ ಸವಾಲುಗಳು ಬಂದರು ಅದನ್ನು ಎದುರಿಸಿ ಅಭಿವೃದ್ಧಿ ಕಡೆಗೆ ಸಾಗಬೇಕು. ಶ್ರಮವಿಲ್ಲದೆ ಯಾವ ಸಾಧನೆಯೂ ಸಾಧ್ಯವಿಲ್ಲ. ವ್ಯಕ್ತಿ ಬೆಳೆಯಲು ಕಾಲಾವಕಾಶ ಬೇಕಾಗುತ್ತದೆ ಎಂದು ಹಲವು ಮಹನೀಯರ ಉದಾಹರಣೆ ನೀಡಿದರು. ಮುಂಬರುವ ದಿನಗಳಲ್ಲಿ ಒಳ್ಳೆಯ ಬರವಣಿಗೆಗೆ ಮಹತ್ವವಿರುವದಿಲ್ಲ ಬರಿ ಅಕ್ಷರಗಳನ್ನು ಗುರುತಿಸುವ ಸಾಮರ್ಥ್ಯವಿದ್ದರೆ ಸಾಕು. ವಾಚಿಸಿದರೆ ಮೊಬೈಲ್ ನಲ್ಲಿ ಮುದ್ರಿಸುತ್ತದೆ ಎಂದು ಸಂದೇಶ ನೀಡಿದರು. ಶಾಲೆಯ ಮುಖ್ಯೋಪಾದ್ಯಾಯುರಾದ ಸಚಿನ್ ಬತ್ರಾರವರು ವಾರ್ಷಿಕ ವರದಿಯನ್ನುಮಂಡಿಸುತ್ತಮಕ್ಕಳು ದೈಹಿಕ ಮತ್ತು ಮಾನಸಿಕವಾಗಿ ಸದೃಡ ಹೊಂದಲು ಪಠ್ಯ-ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವದರ ಮೂಲಕ ಸರ್ವತೋಮುಖ ಅಭಿವೃದ್ಧಿ ಹೊಂದುವಲ್ಲಿ ನಮ್ಮ ಶಾಲೆ ಶ್ರಮಿಸುತ್ತಿದೆ ಎಂದು ಹೇಳಿದರು. ಉಪ ಮುಖ್ಯೋಪಾದ್ಯಾಯರಾದ ಶ್ರೀಮತಿ ರಿಚಾ ಬತ್ರಾ ರವರು ವ0ದನಾರ್ಪಣೆ ಸಲ್ಲಿಸಿದರು. ನ0ತರ ಶಾಲಾ ವಿದ್ಯಾರ್ಥಿಗಳಿ0ದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಭೆಗೆ ಬಂದ ನಗರದ ಪ್ರತಿಷ್ಠಿತ ಗಣ್ಯಮಾನ್ಯರು, ಪಾಲಕರು ಸಾಂಸ್ಕೃತಿಕ ಕಾರ್ಯಕ್ರಮದ ಬಗ್ಗೆ ಪ್ರಶಂಸಿಸುವುದರೊಂದಿಗೆ ಮಕ್ಕಳನ್ನು ಹಾರೈಸಿದರು.

# ಡಾ. ಬಿ.ಡಿ. ಜತ್ತಿ ವಚನ ಸಂಗೀತ ವಿಭೂಷಣ ಪ್ರಶಸ್ತಿ



**ಕಲಬುರಗಿ :** ಬಸವ ಸಮಿತಿ,ಡಾ. ಬಿ.ಡಿ. ಜತ್ತಿ ವಚನಅಧ್ಯಯನ ಮತ್ತು ಸಂಶೋಧನಕೇಂದ್ರ್ರದಅನುಭವ ಮಂಟಪದಲ್ಲಿ ರವಿವಾರ ನಡೆದ ಲಿಂ.ಸೋಮನಾಥಪ್ಪಖೂಬಾ ಸ್ಮರಣಾರ್ಥಅರಿವಿನ ಮನೆಕಾರ್ಯಕ್ರಮದಲ್ಲಿ ವಚನ ಸಂಕ್ರಾಂತಿ ಎಂಬ ವಿಶೇಷಕಾರ್ಯಕ್ರಮಜರುಗಿತು.ಈ ಕಾರ್ಯಕ್ರಮದಲ್ಲಿಕಲಬುರಗಿ ಬಸವ ಸಮಿತಿಯುಸ 'ಂಗೀತಕಲಾವಿದೆಆದಶ್ರೀಮತಿ ಶಾರದಾಜಂಬಲದಿನ್ನಿ ಅವರಿಗೆ"ಡಾ.ಬಿ.ಡಿ. ಜತ್ತಿ ವಚನ ಸಂಗೀತ ವಿಭೂಷಣ ಪ್ರಶಸ್ತಿ-2025?ಪ್ರದಾನಮಾಡಲಾಯಿತು.ಖೂಬಾ ಮನೆತನದಿಂದ 25000 ಸಾವಿರರೂಪಾಯಿಗಳು ನಗದು ಪುರಸ್ಕಾರ, ಪ್ರಶಸ್ತಿ ಫಲಕ ನೀಡಿಗೌರವಿಸಲಾಯಿತು.

ಸಾನಿಧ್ಯ ವಹಿಸಿದ ಬಸವಧರ್ಮದಪೀಠಅಧ್ಯಕ್ಷರಾದ ಪೂಜ್ಯಶ್ರೀ ಮಹಾಜಗದ್ಗುರುಡಾ. ಮಾತೇಗಂಗಾದೇವಿ ಅವರು ಮಾತನಾಡಿ ವಚನ ಸಾಹಿತ್ಯವನ್ನು ಸಂಗೀತಕ್ಕೆಅಳವಹಿಸಿದವರೆಸಿದ್ದರಾವ 'ಜಂಬಲದಿನ್ನಿ ಅವರುಎಂದು ನುಡಿದರು.ಸಂಗೀತ ಮನಸ್ಸಿಗೆ ನೆಮ್ಮದಿ ಅಲ್ಹಾದವನ್ನು ನೀಡುತ್ತದೆ. ದೇವರ ನಿಲುವು ಹಾಲಿನೊಳಗಿನತುಪ್ಪದಂತಿರುತ್ತದೆ. ಕಲ್ಲಿನೊಳಗಿನ ಹೊನ್ನಿನಂತೆ, ಮರದೊಳಗಿನಅಗ್ನಿಯಂತೆಇದೆಎಂದು ಹೇಳಿದರು.

ಕಾರ್ಯಕ್ರಮದಅಧ್ಯಕ್ಷತೆ ವಹಿಸಿದ ಬೆಂಗಳೂರಿನಕೇಂದ್ರ ಬಸವ ಸಮಿತಿಯ ಅಧ್ಯಕ್ಷರಾದ ಡಾ.ಅರವಿಂದಜತ್ತಿಅವರು ಮಾತನಾಡಿ ವ್ಯಕ್ತಿ ಶರಣನಾಗಬೇಕು,ಅಂಗದಿಂದ ಲಿಂಗದೆಡೆಗೆ ಸಾಗಿ ದಾಗಜೀವನ್ಮುಕ್ತಿದೊರೆಯುತ್ತದೆಎಂದು ನುಡಿದರು. ಕಾರ್ಯಕ್ರಮದಲ್ಲಿ ಡಾ.ವಿಲಾಸವತಿಖೂಬಾ, ಡಾ. ವೀರಣ್ಣದಂಡೆ, ಡಾ.ಜಯಶ್ರೀದಂಡೆ, ಶಾರದಾಜತ್ತಿ, ಶ್ರೀರಾಜೇಂದ್ರಖೂಬಾ, ಶ್ರೀಅಲ್ಲಮಪ್ರಭುಖೂಬಾ, ಪಂ. ರೇವಯ್ಯ ವಸ್ತ್ರದ ಮಠ, ಶ್ರೀ ಮಹಾಂತೇಶ ಹರವಾಳ, ಉಪಸ್ಥಿತರಿದ್ದರು.

# ಆರ್ಥಿಕ ವರ್ಷ ಅಂತ್ಯವಾಗುವದರೊಳಗೆ ಅನುದಾನ ಸದ್ಬಳಕೆಯಾಗಲಿ: ಮೊಹಿಸಿನ್



**ಬಾಗಲಕೋಟೆ :** 2024-25ನೇ ಸಾಲಿನ ಆರ್ಥಿಕ ವರ್ಷ ಅಂತ್ಯವಾಗುವದರೊಳಗೆ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಮೊಹಮ್ಮದ ಮೊಹಿಸಿನ್ ಸೂಚಿಸಿದರು.

ಜಿಲ್ಲಾ ಪಂಚಾಯತ್ ನೂತನ ಸಭಾಂಗಣದಲ್ಲಿ ಶನಿವಾರದಂದು ಜರುಗಿದ 4ನೇ ಮಾಸಿಕ ಕೆ ಡಿ ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಆರ್ಥಿಕ ವರ್ಷ ಮುಗಿಯುವ ಮಾರ್ಚ ಅಂತ್ಯದೊಳಗೆ ಎಲ್ಲಾ ಇಲಾಖೆಗಳ ಮುಖ್ಯಸ್ಥರು ತಮಗೆ ನೀಡಿರುವ ವಿವಿಧ ಕಾಮಗಾರಿಗಳಿಗೆ ಬೇಕಾಗುವ ಅನುದಾನ, ಹೊರಗುತ್ತಿಗೆ ನೌಕರರಿಗೆ ಬೇಕಾಗುವ ಸಂಬಳದ ಅನುದಾನ ಸೇ-ರಿದಂತೆ ಎಲ್ಲ ರೀತಿಯ ಅನುದಾನವನ್ನು ಖರ್ಚು ಮಾಡಬೇಕು. ಅನುದಾನ ಖರ್ಚು ಆಗದಿದ್ದಲ್ಲಿ ಬೇರೆ ಕಡೆ ವರ್ಗ ಆಗುವದರಿಂದ ಭೌತಿಕ ಪ್ರಗತಿ ಕುಂಠಿತಗೊಳ್ಳುತ್ತದೆ ಎಂದರು.

ಬರುವ ಫೆಬ್ರುವರಿ 22 ರಿಂದ 24 ರವರೆಗೆ ರನ್ನ ವೈಭವ ಉತ್ಸವ ಹಾಗೂ ಮಾರ್ಚ 1, 2 ಮತ್ತು 3 ರಂದು ಚಾಲುಕ್ಯ ಉತ್ಸವವನ್ನು ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಚರಿಸುತ್ತಿರುವುದು ಸಂತೋಷದ ವಿಷಯವಾಗಿದ್ದು, ಇನ್ನು ಮುಂದೆ ಪ್ರತಿ ವರ್ಷ ಒಂದು ನಿರ್ಧಿಷ್ಟ ಪಡಿಸಿದ ದಿನಾಂಕದಂದೇ ಉತ್ಸವಗಳನ್ನು ಆಚರಿಸಿದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೂರದ ಬೆಂಗಳೂರು, ಮೈಸೂರು ಸೇರಿದಂತೆ ದಕ್ಷಿಣ ಕರ್ನಾಟಕದ ಪ್ರವಾಸಿಗರನ್ನು ನಮ್ಮ ಬಾದಾಮಿ, ಪಟ್ಟದಕಲ್ಲು, ಐಹೊಳೆ ಮುದೋಳದತ್ತ ಸೆಳೆಯಬಹುದಾಗಿದೆ ಎಂದು ತಿಳಿಸಿದರು.

ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶಕ್ಕೆ ಒತ್ತು ನೀಡಬೇಕು. ಸತತ ಮೂರು ವರ್ಷಗಳ ಕಾಲ ಯಾವ ಯಾವ ಶಾಲೆಯಲ್ಲಿ ಒಂದೇ ವಿಷಯದಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ ಎಂಬುದನ್ನು ತಿಳಿದು ಆ ವಿಷಯದ ಶಿಕ್ಷಕರಿಗೆ ತರಬೇತಿ ನೀಡಿ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಬೇಕು ಎಂದರು.

ಪ್ರಮುಖವಾಗಿ ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಎಮ್ ಆರ್ ಐ ಸ್ಕ್ಯಾನಿಂಗ್ ಸೆಂಟರ್‌ಗಳ ಕೊರತೆ ಇರುವುದು, ಔಷಧಿಗಳ ಪೂರೈಕೆಯಲ್ಲಿ ವಿಳಂಬದ ವಿಷಯ ಪತ್ರಿಕೆಗಳಲ್ಲಿ ವರದಿಯಾಗುತ್ತಿದ್ದು ಜಿಲ್ಲಾ ಆರೋಗ್ಯ ಅಧಿಕಾರಿ ಇವುಗಳತ್ತ ಗಮನ ನೀಡಬೇಕು. ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾದ ಹಾಸಿಗೆ ಹೊದಿಕೆ ನೀಡಿ ಸಮಸ್ಯೆ ನಿವಾರಿಸಬೇಕು ಹಾಗೂ ಕೆ ಎಮ್ ಎಫ್ ನ ಬಾಕಿ ಉಳಿಸಿಕೊಂಡ ಬಿಲ್ಲ್‌ಗಳನ್ನು ಬಗೆಹರಿಸಬೇಕು ಎಂದು ಹೇಳಿದರು. ತೋಟಗಾರಿಕೆ, ಕೃಷಿ, ರೇಷ್ಮೆ ಪಂಚಾಯತ್ ರಾಜ್, ಆಯುಷ್, ಪಶುಪಾಲನೆ ಸೇರಿದಂತೆ ವಿವಿಧ ಇಲಾಖೆಗಳ ಮಾಸಿಕ ಗುರಿಸಾಧನೆಗಳ ಕುರಿತು ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಅವರೊಂದಿಗೆ ಚರ್ಚಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಜಾನಕಿ ಕೆ.ಎಮ್. ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿ ಆಚರಣೆ

**ಕಲಬುರಗಿ :** ನಗರದ ಚೌಡೇಶ್ವರ ಕಾಲನಿಯಲ್ಲಿರುವ ಶ್ರೀ ಚೌಡೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ 905ನೇ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿ-ಥಿಯಾಗಿ ಪ್ರಸೂತಿ ಹಾಗೂ ಸ್ತ್ರೀ ರೋಗತಜ್ಞರಾದ ಡಾ. ಗಂಗಾಂಬಿಕಾ ನಿಷ್ಠಿ ಆಗಮಿಸಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಮಲ್ಲೇಶಪ್ಪ ಶಕ್ತಿ ವಕೀಲರು ಮಿಣಜಗಿ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ಸಭಿಕರನ್ನು ಹಾಗೂ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಅವರ ತಂದೆ ಪೂಜ್ಯ ತಂದೆ ಶರಣಬಸಪ್ಪ ಅಪ್ಪಾ ಹಾಗೂ ದಿವಂಗತ ಶ್ರೀ ಮಲ್ಲೇಶಪ್ಪ ಶಕ್ತಿ ವಕೀಲರ ಜೊತೆ ಸ್ನೇಹ ಮತ್ತು ಒಡನಾಟ ನೆನಪಿಸಿಕೊಂಡರು. ಖ್ಯಾತ ವಕೀಲರಾದ ಶ್ರೀ ಮಲ್ಲೇಶಪ್ಪ ಶಕ್ತಿ ವಕೀಲರು ಶಿಕ್ಷಣ ಪ್ರೇಮಿ ಅಲ್ಲದೆ ಸಮಾಜದ ಬಾಂಧವರ ಸಲುವಾಗಿ ಗಂಗಾನಗರ ಮತ್ತು ಚೌಡೇಶ್ವರ ಕಾಲೋನಿ ನಿರ್ಮಾಣ ಮಾಡಿದಕ್ಕೆ ಅಭಿನಂದಿಸಿದರು. ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಈ ಶಿಕ್ಷಣ ಸಂಸ್ಥೆಯು 1972ರಲ್ಲಿ ಪ್ರಾರಂಭವಾಗಿದ್ದು, ಇದುವರೆಗೆ ತನ್ನ ಪ್ರಾಮುಖತೆಯನ್ನು ಕಾಪಾಡಿಕೊಂಡು ಬಂದಿದೆ ಎಂದು ಶ್ಲಾಘಿಸಿದರು. ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು, ಉನ್ನತ ಹುದ್ದೆಗಳಲ್ಲಿ ಹೆಸರು ಮಾಡಿರುವುದನ್ನು ಉದಾಹರಣೆ ಸಹಿತ ವಿವರಿಸಿದರು.

ಸಂಸ್ಥೆಯ ಅಧ್ಯಕ್ಷರಾದ ಖ್ಯಾತ ಪ್ರಸೂತಿ ಹಾಗೂ ಸ್ತ್ರೀ ರೋಗ ತಜ್ಞ ಡಾ. ಇಂದಿರಾ ಶಕ್ತಿ ಅವರು ಶ್ರೀ ನಿಜಶರಣ ಅಂಬಿಗರ ಭಾವಚಿತ್ರಕ್ಕೆ ಮುಖ್ಯ ಅತಿಥಿಗಳೊಂದಿಗೆ ಮಾಲಾರ್ಪಣೆ ಮಾಡಿದರು. 12ನೇ ಶತಮಾನದಲ್ಲಿ ಬಸವಣ್ಣನವರ ಜೊತೆಗೆ ಅನುಭವ ಮಂಟದಲ್ಲಿ ಬಸವಣ್ಣನವರ ಜೊತೆಗೆ ತಮ್ಮ ವಿಶೀಷ್ಟ ವಚನ ಸಾಹಿತ್ಯದಿಂದ ಸಮಾಜದ ಜನರನ್ನು ಜಾಗೃತಿಗೊಳಿಸುವ ಶ್ರೇಯಸ್ಸು ನಿಜಶರಣರಿಗೆ ಸೇರಿತು. ನಿಜಶರಣರು ವಿಶೇಷವಾಗಿ ಹೆಣ್ಣು ಮಕ್ಕಳ ಆರ್ಥಿಕ, ಸಮಾಜಿಕ, ಶೈಕ್ಷಣಿಕ ಭದ್ರತೆಗಾಗಿ ಶ್ರಮ ಪಟ್ಟವರು. ಅವರ ವಚನ ಮತ್ತು ಅವರ ಮಾರ್ಗದರ್ಶನ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಹೋಗಬೇಕೆಂದು ಅಭಿಪ್ರಾಯ ಪಟ್ಟರು. ಶಾಲೆಯ ವಿದ್ಯಾರ್ಥಿಗಳು ಅಂಬಿಗರ ಚೌಡಯ್ಯನವರ ವಚನಗಳನ್ನು ಹೇಳಿದರು. ಸಮಾಜದ ಮುಖಂಡರಾದ ವಿಜಯಕುಮಾರ, ಸಾಯಬಣ್ಣ ಬೆಳಗುಂಪಿ, ಬಸವ ಪಟ್ಟಣ, ಅಯ್ಯಪ್ಪ ಮಿಣಜಗಿ, ಸುಖದೇವ ಕೋಗನೂರ, ಶಿವರಾಜ ಕಿರಸಾವಳಗಿ, ಸುರ್ಯಕಾಂತ ಜಮಾದಾರ, ಅಶೋಕ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State